(ಸಭೆಯ ಕಲಾಪವು ಬೆಳಿಗ್ಗೆ 11.10 ಕ್ಕೆ ಪ್ರಾರಂಭವಾಯಿತು. ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಈ ಹಂತದಲ್ಲಿ ಬಿಜೆಪಿಯ ಮಾನ್ಯ ಸದಸ್ಯರುಗಳೆಲ್ಲರೂ ಬಾವಿಯಲ್ಲೆ ನಿಂತುಕೊಂಡು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು:– ಈಗ ಮಾನ್ಯ ಯಡಿಯೂರಪ್ಪನವರೆ ಪ್ರಶ್ನೋತ್ತರ ಆಗಲಿ ಆಮೇಲೆ ನಿಮ್ಮ. . . .

(ಈ ಹಂತದಲ್ಲೆ ಬಾವಿಯಲ್ಲೆ ನಿಂತಿದ್ದಂತಹ ಮಾನ್ಯ ಸದಸ್ಯರುಗಳು ಬೇಕು ಬೇಕು, ನ್ಯಾಯ ಬೇಕು ಎಂದು ಘೋಷಣೆ ಮಾಡುತ್ತಿದ್ದರು)

ಒಬ್ಬರು ಮಾನ್ಯ ಸದಸ್ಯರು:– ನಮ್ಮ ಸರ್ಕಾರಕ್ಕೆ ಜಯವಾಗಲಿ, ನಮ್ಮ ರೈತರ ಪರ ಸರ್ಕಾರಕ್ಕೆ ಜಯವಾಗಲಿ.

(ಈ ಹಂತದಲ್ಲೆ ಮಾನ್ಯ ಬಿಜೆಪಿ ಸದಸ್ಯರುಗಳು ಬಾವಿಯಲ್ಲಿ ನಿಂತು ರೈತ ವಿರೋಧಿ ಸಮ್ಮಿಶ್ರ ಸರ್ಕಾರಕ್ಕೆ ಧಿಕ್ಕಾರ ಎಂದು ಕೂಗುತ್ತಿದ್ದರು)

ಒಬ್ಬರು ಮಾನ್ಯ ಸದಸ್ಯರು:– ರೈತರ ಪರ ಸರ್ಕಾರಕ್ಕೆ. . . .

(ಗೊಂದಲ)

ಅಧ್ಯಕ್ಷರು:– ತಾವೇನು ಇಲ್ಲೆ ಬಂದು ಘೊಷಣೆ ಕೂಗುವುದು ಒಂದು ಕೆಲಸವಾಗಿದೆ ಎಂದುಕೊಂಡಿದ್ದೀರಾ?

(ಗೊಂದಲ)

ಅಧ್ಯಕ್ಷರು:– ಯಡಿಯೂರಪ್ಪನವರೆ, ಪ್ರಶ್ನೋತ್ತರವಾಗಲಿ;

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ತಮಗೆ ಎರಡು ಸಂಗತಿಗಳನ್ನು ಮನವರಿಕೆ ಮಾಡುತ್ತೇನೆ.

ಅಧ್ಯಕ್ಷರು:– ಪ್ರಶ್ನೋತ್ತರವಾದ ಮೇಲೆ....

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ನಾನು ಹೇಳುತ್ತೇನೆ. ಶುಕ್ರವಾರದ ದಿವಸ ನಾವು ಗೆಲ್‌ನಲ್ಲೆ ನಿಂತುಕೊಂಡು ಧರಣಿ ಮಾಡಿದೆವು. ಇವತ್ತು ಮೀಡಿಯಾದಲ್ಲೂ ಸಹ ರಾಜ್ಯದಲ್ಲಿರುವಂತಹ ಎಲ್ಲರಿಗೂ ಕೂಡ ಒಂದು ರೀತಿ ತಪ್ಪು ಗ್ರಹಿಕೆಯಾಗುತ್ತಿದೆ. ಆದರೂ ತಪ್ಪು

ತಿಳಿದುಕೊಂಡ ಹಾಗೆ ಕಾಣುತ್ತದೆ. ತಾವು ಅವಧಿ ವಿಸ್ತರಣೆ ಬಗ್ಗೆ ಸೆಪ್ಟಂಬರ್ ಕೊನೆಯವರೆಗೆ ಮಾಡಿದಿರಿ, ಅದು ಓಕೆ. ಆದರೆ, ನಾವು ಅವಧಿ ವಿಸ್ತರಣೆಯನ್ನು ಮಾರ್ಚ್ ಕೊನೆಯವರೆಗೆ ಮಾಡಿ ಎಂದು ಕೇಳಿದೆವು; ಅದು ಬೇಡವೆಂದರೂ ಡಿಸೆಂಬರ್ ಕೊನೆಗೆ ಬೆಳೆ ಬಂದಿರುತ್ತದೆ. ರೈತರಿಗೆ ಹಣವನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನ್ಯಾಯವಾಗಿ ನೀವೆ ಹೇಳುತ್ತೀರಿ, ನಾಲ್ಕು ವರ್ಷ ಬರಗಾಲ ಎಂದ್ಹೇಳಿ ಆದ್ದರಿಂದ ಕೈ ಮುಗಿದು ಪ್ರಾರ್ಥನೆ ಮಾಡಿದೆವು. ಒಪ್ಪಲಿಲ್ಲ. ಆದರೆ, ಈಗ ಸೆಪ್ಟಂಬರ್ ಕೊನೆಯವರೆಗೆ ವಿಸ್ತರಣೆ ಮಾಡಿದಿರಿ. ಆಯಿತು, ಅದರ ಬಗ್ಗೆ ಸರ್ಕಾರ ಒಂದು ನಿಲುವು ತೆಗೆದುಕೊಂಡಿದೆ. ಅದರ ಬಗ್ಗೆ ನಾವು ಏನೂ ವ್ಯತ್ಯಾಸ ಮಾಡುವುದಕ್ಕೆ ಹೋಗುವುದಿಲ್ಲ. ಬಹಳ ಸ್ಪಷ್ಟವಾಗಿ ನಮ್ಮ ರಾಜ್ಯದ ಜನತೆಗೆ ಇಲ್ಲಿ ಗೊತ್ತಾಗ ಬೇಕಾಗಿರತಕ್ಕಂಥ ಸಂಗತಿ ಎಂದರೆ....

ಅಧ್ಯಕ್ಷರು:– ನನ್ನ ವಿನಂತಿ, ನಿಮ್ಮಲ್ಲೆ ಏನೆಂದರೆ, ಮೊದಲು ಪ್ರಶ್ನೋತ್ತರ ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಲ್ಲ, ಅದು ಆಗುವುದಿಲ್ಲ. ಇದು ಬಹಳ ಮುಖ್ಯ. ಅದನ್ನು ಆಮೇಲೆ ತಾವು ತೆಗೆದುಕೊಳ್ಳಿ. ಈಗ ಎಲ್ಲಾ ಗೆಲ್‌ನಲ್ಲೆ ಇದ್ದೇವೆ ಪ್ರಶ್ನೋತ್ತರ ನಂತರ ತೆಗೆದುಕೊಳ್ಳಿ.

ಅಧ್ಯಕ್ಷರು:– ಈಗ ನಾನು ಹೇಳುವುದೇನೆಂದರೆ, ಪ್ರಶ್ನೋತ್ತರ ಮಾಡಿದ ಮೇಲೆ ನೀವು ವಿಷಯ ಎತ್ತಿದರೆ, ಆಗ ಅವರನ್ನು ಕರೆದು ಮಾತನಾಡು ವುದಕ್ಕೆ ಅವಕಾಶವಾಗುತ್ತದೆ. ಇಲ್ಲದೆ ಇದ್ದರೆ ಏನು ಪ್ರಯೋಜನವಾಗುತ್ತದೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವು ಪ್ರಶ್ನೋತ್ತರ ತೆಗೆದುಕೊಳ್ಳಿ, ಆದರೆ ದಯವಿಟ್ಟು ನನ್ನ ಮಾತು ಕೇಳಿ.

ಅಧ್ಯಕ್ಷರು:– ಪ್ರಶ್ನೋತ್ತರ ಆದಮೇಲೆ ಒಳಗಡೆ ಕರೆದು ಅವರ ಜೊತೆ ಮಾತನಾಡುವುದಕ್ಕೆ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಒಳಗಡೆ ಕರೆದು ಮಾತನಾಡುವುದು ಏನು ಅಗತ್ಯವಿಲ್ಲ. ಇಲ್ಲೇ ಬಹಿರಂಗವಾಗಿ ನಾವು ಕೇಳುತ್ತಿರುವಂತಹ ನ್ಯಾಯಯುತವಾದಂತಹ ಬೇಡಿಕೆ ಏನಿದೆ ಅದು ನಿಮಗೆ ಮನವರಿಕೆಯಾಗದೆ ನಂತರ ಅದರ ಬಗ್ಗೆ ಸರ್ಕಾರಕ್ಕೆ ತಾವು.

ಅಧ್ಯಕ್ಷರು:– ನಾನು ಸರ್ಕಾರಕ್ಕೆ ಇದರ ಬಗ್ಗೆ ಹೇಳುವುದಾದರೆ, ಅವರು

ಮಾಡುವುದಾದರೆ ದಿನಾ ನಾನು ಆರ್ಡರ್ ಮಾಡುವುದೆ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಮ್ಮ ಹಣಕಾಸಿನ ಸಚಿವರು, ಹೋರಾಟ ಮಾಡುವುದು ರಾಜಕೀಯ ದೊಂಬರಾಟ ಎಂದು ನಮ್ಮ ಬಗ್ಗೆ ಹೇಳಿದ್ದಾರೆ. ಅವರು ಏನು ಬೇಕಾದರೂ ಸರ್ಟಿಫಿಕೇಟ್ ಕೊಡಲಿ. ಅವರು ಆಡಳಿತ ಪಕ್ಷದಲ್ಲಿ ಇದ್ದಾರೆ, ಅಧಿಕಾರದಲ್ಲಿ ಇದ್ದಾರೆ, ಅವರು ಏನು ಬೇಕಾದರೂ ಮಾತನಾಡಬಹುದು. ಆದರೆ ನಾನು ಇಷ್ಟೆ ಹೇಳುವುದು, ನಮ್ಮ ವಿರೋಧ ಪಕ್ಷದಲ್ಲೆ ಇರುವಂತಹ ಮಾನ್ಯ ವಾಟಾಳ್ ನಾಗರಾಜ್ ಹಾಗೂ ಸ್ನೇಹಿತರು ವಿನಂತಿ ಮಾಡುವುದು ಏನೆಂದರೆ, ಅವಧಿಯನ್ನು ಸೆಪ್ಟೆಂಬರ್ ಕೊನೆಯವರೆಗೆ ವಿಸ್ತರಣೆ ಮಾಡಿದ್ದಾರೆ, ಅದರ ಬಗ್ಗೆ ನಾವು ನಿಮಗೆ ಒತ್ತಾಯ ಮಾಡುವುದಿಲ್ಲ. ಅದನ್ನು ಒಪ್ಪಿಕೊಳ್ಳುತ್ತೇನೆ. ಅದು ನಿಮಗೆ ಬಿಟ್ಟಿದ್ದು. ರೈತರ ಸ್ಥಿತಿಗತಿಗಳನ್ನು ನೋಡುವವರು ನೀವು. ಡಿಸೆಂಬರ್ ಕೊನೆಯವರೆಗೆ ಅವಧಿಯನ್ನು ವಿಸ್ತರಣೆ ಮಾಡಿ ಎಂದು ಈಗಲೂ ಒತ್ತಾಯ ಮಾಡುತ್ತೇನೆ. ಆ ರೀತಿ ಮಾಡುತ್ತಾರೋ ಬಿಡುತ್ತಾರೋ ಅದು ನಿಮಗೆ ಬಿಟ್ಟಿದ್ದು. ನನ್ನ ಪ್ರಶ್ನೆ ಏನೆಂದರೆ, ನೀವು ಬಜೆಟ್‌ನಲ್ಲೆ ಏನು ಹೇಳಿದ್ದೀರಿ, ರಾಜ್ಯದ ರೈತರು 2001 ರಿಂದ 2004ರ ಅವಧಿಯವರೆಗೆ ಸತತವಾಗಿ ಬರಗಾಲದಿಂದ ತೊಂದರೆಗೆ ಒಳಗಾಗಿದ್ದರು. ಆದುದರಿಂದ ರೈತರು ಸಹಕಾರಿ ಬ್ಯಾಂಕುಗಳಲ್ಲಿ ದಿ: 31.03.2004 ವರೆಗೆ ಪಡೆದಿರುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಬೆಳೆ ಸಾಲದ ಮೇಲಿನ ಬಡ್ಡಿ ಮತ್ತು ದಂಡ ಬಡ್ಡಿಯನ್ನು ಮನ್ನಾ ಮಾಡಲು ನಾನು ಉದ್ದೇಶಿಸಿದ್ದೇನೆ. ಈ ರೀತಿ ನೀಡುತ್ತಿರುವ ಬಡ್ಡಿ ಮನ್ನಾ ಯೋಜನೆ ಕಾಫಿ ಬೆಳೆಗಾರರಿಗೂ ಅನ್ವಯಿಸುತ್ತದೆ. ರೈತರು ಮತ್ತು ಕಾಫಿ ಬೆಳೆಗಾರರು ತಮ್ಮ ಪೂರ್ಣ ಸಾಲದ ಅಸಲನ್ನು ಜೂನ್ 5 ರೊಳಗೆ ಪಾವತಿ ಮಾಡಿ ಈ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ. ಇದು ಒಂದು ಸಲ ಅಂತಿಮವಾಗಿ ನೀಡುವ ಪರಿಹಾರವಾಗುತ್ತದೆ. ಈ ಉದ್ದೇಶಕ್ಕಾಗಿ 2005-06ನೇ ಸಾಲಿನಲ್ಲಿ 450 ಕೋಟಿ ರೂಪಾಯಿ ತೆಗೆದಿಟ್ಟಿದ್ದಾರೆ. ಇದರ ಬಗ್ಗೆ ತಾವು ಸರ್ಕಾರಿ ಆಜ್ಞೆಯಾಗಿತ್ತು ಹೊರಡಿಸಿದ್ದೀರಿ ಎಂದರೆ ದಿ: 27-04-2005ರಲ್ಲಿ ಹೊರಡಿಸಿದೆ. ನೀವು ಕೇಳಿಕೊಂಡು ಬನ್ನಿ, ತರಿಸಿ ಆ ವಿವರವನ್ನು. ನಾನು ಬಾಗಲಕೋಟೆಯ ನಮ್ಮ ಶಾಸಕರ ಜೊತೆ ಸಮಾಲೋಚನೆ ಮಾಡಿದೆ. ದಿ: 31.03.2005 ರ ಒಳಗೆ ಅಸಲು ಮಾತ್ರ ಕಟ್ಟಿಸಿಕೊಂಡು, ಬಡ್ಡಿ ಮನ್ನಾ ಮಾಡಿ ಹೊಸ ಸಾಲ ಕೊಟ್ಟು ಆಗಿದೆ.

ಅದೊಂದು ಕೆಟಗರಿ. ದಿ: 31.03.05 ರವರೆಗೆ ಇನ್ನೊಂದು ಕೆಟಗರಿ. ನೀವು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ.

ಅಧ್ಯಕ್ಷರು:– ಈಗ ದಿ: 31.03.05ರಲ್ಲಿ ಬಡ್ಡಿ ಮನ್ನಾ ಮಾಡಿ ಕಟ್ಟಿಸಿಕೊಂಡಿದ್ದಾರ?

ಮನ್ನಾ ಮಾಡಿ ಅಸಲು ಮಾತ್ರ ಕಟ್ಟಿಸಿಕೊಂಡಿದ್ದಾರೆ. 'ಏಕೆಂದರೆ, ಅವರುಗಳು ಈ ಬಜೆಟ್ ಓದಿದರು ಹಾಗೂ ಪತ್ರಿಕೆಯಲ್ಲೂ ಕೂಡ ಬಡ್ಡಿ ಮನ್ನಾ ಆಗಿದೆ ಎಂದು ಬಂತು. ಭಾಷಣವನ್ನು ಇನ್ನೊಂದು ಕಡೆ ಹೇಗೆಂದರೆ ಕೆಲವು ಸಹಕಾರ ಸಂಘಗಳವರು ಅಸಲು–ಬಡ್ಡಿ ಎರಡನ್ನೂ ರಿನ್ಯೂವಲ್ ಆಗುತ್ತದೆಂದು ಕಟ್ಟಿಸಿಕೊಂಡರು. ಬಡ್ಡಿಯನ್ನು ಬೇರೆ ಖಾತೆಯಲ್ಲಿ ಇಟ್ಟರು. ಬಡ್ಡಿ ಮನ್ನಾ ಎಂದು ಅನೇಕ ಸಹಕಾರ ಸಂಘಗಳಲ್ಲಿರುವವರು ಬಡ್ಡಿ ಮನ್ನಾ ಮಾಡಿಬಿಟ್ಟು ಅಸಲು ಮಾತ್ರ ಕಟ್ಟಿಸಿಕೊಂಡು, ಹೊಸದಾಗಿ ಸಾಲವನ್ನೂ ಕೊಟ್ಟಾಯಿತು. ಈಗ ಸರ್ಕಾರ ಅವರಿಗೆ ಬಡ್ಡಿ ಮನ್ನಾ ಯೋಜನೆಯನ್ನು ಜಾರಿಗೆ ತರುತ್ತಿಲ್ಲ. ಇದು ಒಂದು ಬಂದ ತಕ್ಷಣ ನಿಮಗೆ ವಾಪಸ್ಸು ಮಾಡುತ್ತೇವೆಂದು ಹೇಳಿದರು. ಇದು 2ನೆ ಕೆಟಗರಿ. ಆದರೆ ನಾನೇನು ಇವರ ಹತ್ತಿರ ಹೇಳುತ್ತಿದ್ದೇನೆ ಎಂದರೆ ನಿಮ್ಮ ಬಜೆಟ್ ಭಾಷಣದಲ್ಲಿ ಹೇಳಿದಂತೆ ದಿ: 31.03.05ರ ಒಳಗೆ ಯಾರ್ಯಾರು ಸಾಲವನ್ನು ಬಡ್ಡಿ ಸಹಿತ ಕಟ್ಟಿದ್ದಾರೆ, ಆ ಬಡ್ಡಿಯನ್ನು ವಾಪಸ್ಸು ಕೊಡಿ. ಯಾವ ಸಹಕಾರ ಸಂಘಗಳು ಬಡ್ಡಿಯನ್ನು ಕಟ್ಟಿಸಿಕೊಳ್ಳದೆ ಬರೀ ಅಸಲು ಕಟ್ಟಿಸಿಕೊಂಡು ರಿನ್ಯೂವಲ್ ಮಾಡಿದ್ದಾರೆ, ಅವರಿಗೆ ತೊಂದರೆಯಾಗದ ಹಾಗೆ ನೋಡಿಕೊಳ್ಳಿ. ಇದಿಷ್ಟೆ ನಮ್ಮ ಬೇಡಿಕೆ. ಇನ್ನು 2ನೇಯದಾಗಿ ತಾವು ಅವಧಿಯನ್ನು ಸೆಪ್ಟಂಬರ್‌ವರೆಗೆ ವಿಸ್ತರಣೆ ಮಾಡಿದ್ದಾರಲ್ಲ. ಆ ಆಜ್ಞೆಯಲ್ಲಿ ಈ ವಿಸ್ತರಣೆ ಮಾಡಿದಂತಹ ಅವಧಿಗೆ ಬಡ್ಡಿ ಮನ್ನಾ ಎಂದು ಹೇಳಿ, ಇಲ್ಲ ನಾನು ಜೂನ್ ಕೊನೆಗೆ ಎಂದರೆ ದಿ: 30 ರಂದು ದುಡ್ಡು ಕಟ್ಟಿದೆ. ಅದಕ್ಕೆ ಅಲ್ಲಿ ಬಡ್ಡಿ ಮನ್ನಾ ಮಾಡಿಲ್ಲ. ಏಕೆಂದರೆ, ಆಮೇಲೆ ಸರ್ಕಾರ ಏನು ಮಾಡುತ್ತಾರೆಂದು ನೋಡುತ್ತೇವೆ, ನಂತರ ನೋಡುತ್ತೇನೆಂದು ಹೇಳುತ್ತಿದ್ದಾರೆ. ಆದರೆ ಸರ್ಕಾರಿ ಆಜ್ಞೆಯಲ್ಲಿ ಅದು ಇಲ್ಲ. ಈ ಸೆಪ್ಟೆಂಬರ್‌ವರೆಗೂ ವಿಸ್ತರಣೆ ಮಾಡಿದ್ದಾರೆ. ಇದರ ಆಜ್ಞೆ ಏನು ಹೇಳಬೇಕು? ಸೆಪ್ಟೆಂಬರ್‌ವರೆಗೆ ಯಾರು ಅಸಲನ್ನು ಕಟ್ಟುತ್ತಾರೆ ಅಲ್ಲಿಯವರೆಗೆ ಹೊಸದಾಗಿ ಬಡ್ಡಿಯನ್ನು ಹಾಕದೆ ಮನ್ನಾ ಮಾಡುತ್ತೇವೆಂದು ಹೇಳಬೇಕು. ಆಗ ರೈತ ಉಳಿದುಕೊಳ್ಳುತ್ತಾನೆ. ಇದು ಒಂದು ಭಾಗ. ಇನ್ನೊಂದು

ವಿಚಾರ ಎಂದರೆ ನಮ್ಮ ಅಣ್ಣ ಸಹಕಾರ ಸಂಘದಲ್ಲಿ ಸಾಲ ತೆಗೆದುಕೊಂಡಿದ್ದಾರೆ. ಆದರೆ, ತಮ್ಮ ರಾಷ್ಟ್ರೀಕೃತ ಬ್ಯಾಂಕ್ ಸಿಂಡಿಕೇಟ್‌ನಲ್ಲಿ ಸಾಲ ತೆಗೆದುಕೊಂಡಿದ್ದಾನೆ. ಮೂರ್ನಾಲ್ಕು ವರ್ಷ ಬರಗಾಲ ಎಂದು ಇತ್ತು. ಸಹಕಾರ ಸಂಘದವರಿಗೆ ಬಡ್ಡಿ ಮನ್ನಾ ಎಂದು ಮಾಡಿದ ಮೇಲೆ ಸರ್ಕಾರ ಅದನ್ನು ತುಂಬಿ ಕೊಡುತ್ತದೆ. ಅದೇರೀತಿ ರಾಷ್ಟ್ರೀಕೃತ ಬ್ಯಾಂಕ್‌ನವರ ಮನವೊಲಿಸಿ ಆ ಬಡ್ಡಿ ಮನ್ನಾ ಮಾಡುವುದಕ್ಕೆ ಪ್ರಯತ್ನ ಮಾಡಿ. ಇಲ್ಲವೆ ರಾಜ್ಯಸರ್ಕಾರ ಯಾವರೀತಿ ಕೋ-ಆಪರೇಟೀವ್ ಇನ್ಸ್‌ಟಿಟ್ಯೂಟ್‌ಗಳಿಗೆ ಬಡ್ಡಿಯನ್ನು ಮನ್ನಾ ಮಾಡಿ ಸರ್ಕಾರ ಕಟ್ಟಿ ಕೊಡುತ್ತಿದ್ದೀರಿ, ಅದೇ ರೀತಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಪಡೆದಿರುವಂತಹ ರೈತರಿಗೂ ಕೂಡ ನೀವೆ ಹೇಳಿದಂತೆ, ಆ ಕೆಟಗರಿಯಲ್ಲಿ ಬರುವಂತಹ ರೈತರಿಗೂ ರಾಜ್ಯಸರ್ಕಾರ ತುಂಬಿಕೊಟ್ಟು ಸಾಲ ತೆಗೆದುಕೊಂಡವರಿಗೆ ಕನ್ಸಿಷನ್ ಬಜೆಟ್ ಭಾಷಣ ಬಿಟ್ಟು ಹೊಸದಾಗಿ ಒತ್ತಡ ತರುತ್ತಿದ್ದೇನಾ? ಏಕೆಂದರೆ, ಮೀಡಿಯಾದಲ್ಲೆ ಅವಧಿ ವಿಸ್ತರಣೆ ಬಗ್ಗೆ ಬರುತ್ತಿದೆ. ಅವಧಿ ವಿಸ್ತರಣೆಯನ್ನು ನಾವು ಡಿಸೆಂಬರ್‌ವರೆಗೆ ಏಕೆ ಕೇಳಿದೆವು. ಇವತ್ತು ಎಲ್ಲರೂ ಕೂಡ ಬಿತ್ತನೆ ಕಾರ್ಯ ಮಾಡಬೇಕು, ಗೊಬ್ಬರ ಹಾಗೂ ಬಿತ್ತನೆ ಮಾಡಬೇಕೆಂದು ಬಡಿದಾಡುತ್ತಿದ್ದಾರೆ. ಅನೇಕ ಜನಕ್ಕೆ ಸಾಲ ಸಿಕ್ಕಿಲ್ಲ. ಅವರು ಬದುಕುವುದು ಕಷ್ಟವಾಗಿದೆ. ಅವರುಗಳ ಫಸಲು ಕೈಗೆ ಬಂದಮೇಲೆ ಸಾಲ ಕಟ್ಟಿಸಿಕೊಳ್ಳಿ. ಎನ್ನುವ ಕಾರಣಕ್ಕೋಸ್ಕರ ಡಿಸೆಂಬರ್‌ವರೆಗೆ ವಿಸ್ತರಣೆ ಮಾಡಿ ಎಂದು ಕೇಳಿದೆವು. ಆಯಿತು ಯಡಿಯೂರಪ್ಪನವರೆ, ನಿಮ್ಮ ಮಾತಿಗೆ ಏಕೆ ಬೆಲೆ ಕೊಡಬೇಕು? ಪ್ರತಿಪಕ್ಷ ಗಳು ಹೇಳಿದ ಹಾಗೆ ಕುಣಿಯಬೇಕಾ? ನೀವು ರಾಜಕೀಯ ದೊಂಬರಾಟ ಮಾಡುತ್ತಿದ್ದೀರಿ ಎಂದು ಹೇಳುತ್ತೀರಿ. ಬೇಡ; ನೀವು ಹೇಗೋ ಸೆಪ್ಟಂಬರ್ ಕೊನೆಯವರೆಗೆ ಅವಧಿ ವಿಸ್ತರಣೆ ಮಾಡಿದ್ದೀರಲ್ಲ, ಆಯಿತು. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಮತ್ತೆ ವಿಸ್ತರಣೆ ಬಗ್ಗೆ ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಬಡ್ಡಿ ಮನ್ನಾ ಯೋಜನೆ ಏನಿದೆ ಅದರಲ್ಲಿ ಕಟ್ಟಿದವರಿಗೆ ವಾಪಸ್ಸು ಕೊಡಿ ಎಂದು ಹೇಳುವುದು ಧರ್ಮ. ಇನ್ನು ಮುಂದೆ ಏನಾಗುತ್ತದೆ ಎಂದರೆ ಯಾರು ಪ್ರಾಮಾಣಿಕವಾಗಿ ಸಾಲ ತೆಗೆದುಕೊಂಡು ಬಡ್ಡಿ ಕಟ್ಟುತ್ತಾನೆ ಅವನಿಗೆ ಇದು ಅನ್ಯಾಯವಾಗುತ್ತದೆಂದು ಕಂಡು ದ್ರೋಹ ಮಾಡಿದ ಹಾಗೆ ಆಗುವುದಿಲ್ಲವೇ? ಇಷ್ಟೇ ನಮ್ಮ ಬೇಡಿಕೆ, ಇದಕ್ಕೆ ಸರ್ಕಾರ ಸ್ಪಂದಿಸುವಂತಹ ನೋಡಿಕೊಳ್ಳಬೇಕಾದಂತಹ ವಿಚಾರದ ಬಗ್ಗೆ ತಾವು ಯೋಜನೆ ಮಾಡಿ. ಇನ್ನು ನಾನು ವಿರೋಧ ಪಕ್ಷದಲ್ಲಿ ಇದ್ದು, ಇಲ್ಲೆ

ಕುಳಿತುಕೊಂಡು, ಇಷ್ಟು ನನ್ನ ಕರ್ತವ್ಯ ಮಾಡದೆ ಇದ್ದರೆ ಜನ ನಾಳೆ ನನ್ನನ್ನು ಕೇಳಿದರೆ ನಾನೇನು ಉತ್ತರ ಕೊಡಲಿ. ನನ್ನ ಕರ್ತವ್ಯ ಕಾನೂನು ಚೌಕಟ್ಟಿನಲ್ಲಿ, ಹೊಸದಾಗಿ ಏನು ಕೇಳದೆ, ಬಜೆಟ್‌ನಲ್ಲಿ ನೀನೇನು ಹೇಳಿದ್ದೀರಿ ದಿ: 31.03.04 ರ ಒಳಗೆ ಇರುವಂತಹ ಎಲ್ಲಾ ರೀತಿಯ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ಅದು ರಾಷ್ಟ್ರೀಕೃತ ಬ್ಯಾಂಕುಗಳಿಗೆ ಅನ್ವಯವಾಗುವಂತಹ ರೀತಿಯಲ್ಲಿ ಇರಬೇಕು. ಅದು ಹೇಗೆ ಕೊಡುತ್ತೀರಿ? ನಮಗೆ ಗೊತ್ತಿಲ್ಲ. ಕೇಂದ್ರ ಸರ್ಕಾರವನ್ನು ಒಪ್ಪಿಸಿ, ಇಲ್ಲದೆ ಇದ್ದರೆ ರಾಜ್ಯಸರ್ಕಾರದವರು ಹಣ ಯಾರು ಕಟ್ಟಿದ್ದಾರೆ, ಅದನ್ನು ತುಂಬಿಕೊಟ್ಟು, ಆ ಬಡ್ಡಿ ವಾಪಸ್ಸು ಕೊಡಿ. ಯಾವ ಸಹಕಾರ ಸಂಘಗಳು ಬಡ್ಡಿ ಕಟ್ಟಿಸಿಕೊಳ್ಳದೆ ಅಸಲು ತೆಗೆದುಕೊಂಡು ರಿನ್ಯೂವಲ್ ಮಾಡಿದ್ದಾರೆ, ಅವರಿಗೆ ಸರಿಯಾಗಿ ಕೊಡಿ. ಇಲ್ಲದಿದ್ದರೆ ಎಲ್ಲಾ ರೈತರ ಸಾಲವನ್ನು ನೀವು ಹೊಸದಾಗಿ ಕೊಟ್ಟಹಾಗೆ ಕೊಡಿ. 6 ಪರ್ಸೆಂಟ್ ಬಡ್ಡಿಯಂತೆ ಹೊಸದಾಗಿ ಸಾಲ ಕೊಡುವ ಹಾಗೆ ಕೊಡಿ. ಇದನ್ನು ಮಾಡುವುದಕ್ಕೆ ಏನು ತೊಂದರೆ ಇದೆ? ಅದಕ್ಕೆ ನಮ್ಮ ವಿರೋಧ ಪಕ್ಷದವರೆಲ್ಲಾ ಸೇರಿಕೊಂಡು ಕೇಳಿದ್ದರೆ ಸೆಪ್ಟೆಂಬರ್‌ವರೆಗೆ ಅವಧಿ ವಿಸ್ತರಣೆ ಮಾಡಿದ್ದೀರಿ ಓಕೆ. ಈಗ ಇದನ್ನು ನಾವು ಕೇಳುತ್ತಿದ್ದೇವೆ. ಇದರಲ್ಲಿ ಏನು ವ್ಯತ್ಯಾಸ ಇದೆ? ನಾನೇನಾದರೂ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸುವುದಕ್ಕೆ ಹೊರಟಿದ್ದೇನೆಯೇ? ಕಾನೂನು ಬಾಹಿರವಾಗಿ ಏನಾದರೂ ಮಾತಾನಾಡು ತ್ತಿದ್ದೇನೆಯೇ? ಅಥವಾ ಬೇಡವಾದ ಕೆಲಸ ಮಾಡಿ ಎಂದು ಹೇಳುತ್ತಿದ್ದೇನೆ ಎಂದರೆ ನಿಮ್ಮ ಹತ್ತಿರ ಕ್ಷಮಾಪಣೆ ಕೇಳಿ ಹೊರಗಡೆ ಹೋಗುತ್ತೇನೆ. ಆದರೆ ನಾವು ಇದೆ ರೀತಿ ಮಾಡುವುದು ಎನ್ನುವುದಾದರೆ ನಮ್ಮನ್ನು ಹೊರಗಡೆ ಹಾಕಿ ಸದನವನ್ನು ನಡೆಸಿಕೊಳ್ಳಿ. ಬಹಳ ಚರ್ಚೆ ಬೇಡ. ಕಳೆದ ಒಂದು ವರ್ಷದಿಂದ ನಾವು ಈ ಸರ್ಕಾರಕ್ಕೆ ಸಹಕಾರವನ್ನು ಕೊಟ್ಟುಕೊಂಡು ಬಂದಿದ್ದೇವೆ. ಇವತ್ತು ಬರಗಾಲಕ್ಕೆ ತುತ್ತಾಗಿ ಸಾಯುತ್ತಿರುವಂತಹ ರೈತರುಗಳ ನೆರವಿಗೆ ಬಾರದೆ ಇದ್ದರೆ ನಾವು ರೈತರ ಪ್ರತಿನಿಧಿಗಳಾಗಿ ಇಲ್ಲಿಗೆ ಇರುವುದಕ್ಕೆ ನಾಲಾಯಕ್ಕು ಆಗುತ್ತೇವೆ. ಅದಕ್ಕಾಗಿ ನನ್ನ ಕರ್ತವ್ಯವನ್ನು ಮಾಡಬೇಕಾಗಿದ್ದು, ಎಲ್ಲಾ ಕಾರ್ಯಕಲಾಪವನ್ನು ಬದಿಗೊತ್ತಿ, ನಮ್ಮ ಪ್ರತಿವರ್ಷದ ಎಲ್ಲಾ ಮುಖಂಡರ ಜೊತೆ ಸಮಾಲೋಚನೆ ಮಾಡಿ ಈ ವಿಷಯಕ್ಕೆ ಬಂದಿದ್ದೇನೆ. ಇದನ್ನು ಸ್ವಲ್ಪ ಚರ್ಚೆ ಮಾಡಿ. ಸರ್ಕಾರದವರು 450 ಕೋಟಿ ರೂಪಾಯಿ ತೆಗೆದಿಟ್ಟಿದ್ದೀರಿ. 450 ಕೋಟಿ ರೂಪಾಯಿಯಲ್ಲೆ ಇದುವರೆಗೂ 250 ಕೋಟಿ ರೂಪಾಯಿ ಇದಕ್ಕೆ

ಉಪಯೋಗವಾಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮು):– ಈ 450 ಕೋಟಿ ರೂಪಾಯಿಗಳ ವಿಚಾರವನ್ನು ಉದಾಹರಣೆ ಹೇಳುತ್ತಿದ್ದೇನೆ. ಈಗ ಜೂನ್ ತಿಂಗಳ ಕೊನೆಯೊಳಗೆ ಎಲ್ಲಾ ರೈತರು ಅಸಲನ್ನು ಕೊಟ್ಟಿದ್ದರೆ ನೀವು ಬಡ್ಡಿಯನ್ನು ಮನ್ನಾ ಮಾಡುತ್ತಾ ಇರಲಿಲ್ಲವೇ? ಈಗ ಶೇ.40ರಷ್ಟು ರೈತರು ಕಟ್ಟಿದ್ದಾರೆ, ಇನ್ನು ಶೇ 50ರಷ್ಟು ರೈತರಿಗೆ ನೀವು ಬಡ್ಡಿಯನ್ನು ಮನ್ನಾ ಮಾಡುತ್ತಾ ಇರಲಿಲ್ಲವೇ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಇಲ್ಲಿ ಸಭೆಯನ್ನು ನಡೆಯುವುದಕ್ಕೆ ಬಿಡುವುದಿಲ್ಲ, ಏನು ಇಲ್ಲ. ನೀವು ಏನು ರೈತರನ್ನು ಜಹಗೀರ್ ತೆಗೆದು ಕೊಂಡಿದ್ದೀರಾ? ಸದನದ ಸಮಯವನ್ನು ಹಾಳು ಮಾಡುತ್ತೀರಾ? ನಿಮಗೆ ನಾಚಿಕೆಯಾಗಬೇಕು..

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ: ಕೇಂದ್ರ ಸರ್ಕಾರದಲ್ಲಿ ಬಿ.ಜೆ.ಪಿಯ ಸರ್ಕಾರ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ, ನೀವು ಏನು ಘೋಷಣೆ ಮಾಡಿದ್ದೀರಿ. ರೈತರ ಸಾಲದ ಬಡ್ಡಿಯನ್ನು ಮನ್ನಾ ಮಾಡಿದ್ದಿರಾ? ನೀವು ರೈತರ ಪರವಾಗಿ ಮಾತನಾಡಿದ್ದಿರಾ? ಈಗ ನೀವು ರೈತರ ಪರವಾಗಿ, ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಹೊರಟಿದ್ದೀರಿ.

(ಸದನದ ಬಾವಿಯಲ್ಲಿ ಬಿ.ಜೆ.ಪಿ. ಸದಸ್ಯರು ಧರಣಿ ನಡೆಸುತ್ತಿದ್ದರು, ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರವೆಂದು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು: ಈಗ ನಿಮ್ಮ ನಾಯಕರು ಕೆಲವು ಪ್ರಶ್ನೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಉತ್ತರವನ್ನು ಕೊಡುತ್ತದೆಂಬು ದನ್ನು ಕೇಳಿ. ನೀವು ಘೋಷಣೆ ಹಾಕುವುದನ್ನು ನಿಲ್ಲಿಸಿ, ಇದು ಏನು? ಈ ರೀತಿಯಾಗಿ ಜವಾಬ್ದಾರಿ ಇಲ್ಲದಿರುವಂತಹ ರೀತಿಯಲ್ಲಿ ನಡೆದುಕೊಳ್ಳು ವಂಥಾದ್ದು, ಸರಿಯಲ್ಲ. ಈಗ ಸರ್ಕಾರ ಏನು ಹೇಳುತ್ತದೆಂಬುದನ್ನು ನೋಡೋಣ. ಮಾನ್ಯ ಯಡಿಯೂರಪ್ಪನವರೇ, ನಿಮ್ಮ ಸದಸ್ಯರುಗಳಿಗೆ ಸ್ವಲ್ಪ ಬುದ್ಧಿ ಹೇಳಿ. ನೀವು ಪ್ರಸ್ತಾಪ ಮಾಡಿರುವಂತಹ ವಿಚಾರಕ್ಕೆ ಸರ್ಕಾರ ಉತ್ತರವನ್ನು ಕೊಡಬಾರದೆನು? ಈ ರೀತಿ ಅನ್‌ರೋಲ್ ಆಗಿ ಮಾಡಿದರೆ ಏನು ಮಾಡುವುದು? ಮಾನ್ಯ ಸದಸ್ಯರುಗಳು ಸರಿಯಾದ ರೀತಿಯಲ್ಲಿ, ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿಲ್ಲ.

ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ವಿರೋಧಪಕ್ಷದ ನಾಯಕರಾಗಿ ನಾನು ಕೆಲಸವನ್ನು ನಿರ್ವಹಿಸಬೇಕಾಗಿದೆಯೆಂದು ಹೇಳಿದ್ದಾರೆ. ನೀವು ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವಿರಾ What is this?

ನಿಮ್ಮದು ಕೂಗುವುದೊಂದೇ ಕೆಲಸವೇ? ಸರ್ಕಾರ ಏನು ಹೇಳುತ್ತದೆಂಬುದನ್ನು ನೋಡೋಣ, ಸುಮ್ಮನೆ ಇರಿ.

(ಸದನದ ಬಾವಿಯಲ್ಲಿ ಮಾನ್ಯ ಸದಸ್ಯರುಗಳು ರೈತರ ಬಡ್ಡಿಯನ್ನು ಮನ್ನಾ ಮಾಡಿ, ಪ್ರಾಮಾಣಿಕ ರೈತರ ಬಡ್ಡಿಯನ್ನು ಮನ್ನಾ ಮಾಡಿ ಎಂದು ಘೋಷಣೆ ಕೂಗುತ್ತಿದ್ದರು.)

ಶ್ರೀ ಎಸ್.ಎಲ್.ಧರ್ಮೇಗೌಡ: ಮಾನ್ಯ ಅಧ್ಯಕ್ಷರೇ, ಬಿ.ಜೆ.ಪಿಯವರು ಏನು ಮಾಡಿದ್ದಾರೆಂಬುದು ಇಡೀ ರಾಜ್ಯದ ಜನತೆಗೆ ಗೊತ್ತು. ನೀವು ಮಾಡಿರುವುದನ್ನು ಎಲ್ಲವನ್ನು ಮರತೇ ಬಿಟ್ಟಿದ್ದೀರಿ.

ಅಧ್ಯಕ್ಷರು: ಮಾನ್ಯ ಸದಸ್ಯರುಗಳಿಗೆ ನಾನು ಹೇಳುವಂಥಾದ್ದು, ಏನೆಂದರೆ, ಈ ರೀತಿ ಕೂಗಾಟ ಮಾಡಬಾರದು. ತಾವು ನಿಯಮಗಳಿಗೆ ವಿರುದ್ಧವಾಗಿ ವರ್ತಿಸುತ್ತಿದ್ದೀರಿ, ಇದು ಸರಿಯಲ್ಲ. ಈಗ ವಿರೋಧಪಕ್ಷದ ನಾಯಕರು ಕೆಲವು ವಿಚಾರಗಳನ್ನು ಅವರ ಸೀಟಿನ ಬಳಿ ನಿಂತು ಪ್ರಸ್ತಾಪ ಮಾಡಿದ್ದಾರೆ. ಈಗ ಸದನದಲ್ಲಿ ಸಹಕಾರ ಸಚಿವರು ಹಾಗೂ ಅರ್ಥ ಸಚಿವರು ಇದ್ದಾರೆ. ಅವರು ಏನು ಉತ್ತರವನ್ನು ಕೊಡುತ್ತಾರೆಂಬುದನ್ನು ಕೇಳೋಣ. ದಯಮಾಡಿ ನೀವು ನಿಮ್ಮ ಸೀಟುಗಳಿಗೆ ಹೋಗಿ. ನೀವು ಇಲ್ಲಿಗೆ ಚರ್ಚೆ ಮಾಡಲು ಬಂದಿರುವಂಥಾದ್ದು, ಇಲ್ಲಿ ಕೂಗಾಟಕ್ಕೆ ಬಂದಿಲ್ಲ. ನೀವು ಇಲ್ಲಿ ನಿಮ್ಮ ಪ್ರತಿಭಟನೆಯನ್ನು ತೋರಿಸಿದ್ದೀರಿ. ನಿಮ್ಮ ಪ್ರತಿಭಟನೆಯನ್ನು ತೋರಿಸಿದ ಮೇಲೆ, ಇಲ್ಲಿ ಒಂದು ಗಂಟೆ ಮಾಡಿದರೂ ಅಷ್ಟೆ, ನೂರು ಗಂಟೆ ಮಾಡಿದರೂ ಅಷ್ಟೆ.

ಶ್ರೀ. ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಆಯಿತು, ಅವರು ಉತ್ತರವನ್ನು ಕೊಡಲಿ, ನಮ್ಮದು ಏನು ಅಭ್ಯಂತರವಿಲ್ಲ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸರ್ಕಾರ ಉತ್ತರವನ್ನು ಕೊಡುತ್ತದೆ.

(ಸದನದ ಬಾವಿಯಲ್ಲಿ ಧರಣಿ ಮಾಡುತ್ತಿದ್ದ ಸದಸ್ಯರು ನೀವು

ವಿರೋಧಪಕ್ಷದವರಿಗೆ ಹೇಳಿದಂತೆ ಅವರಿಗೂ ಹೇಳಿ ಎಂದು ಹೇಳುತ್ತಿದ್ದರು)

ಅಧ್ಯಕ್ಷರು: ಅವರಿಗೂ ಹೇಳುತ್ತೇನೆ. ಇಲ್ಲಿ ಈ ಕಡೆ ಎನ್ನುವ ಪ್ರಶ್ನೆ ಇಲ್ಲ. ಎಲ್ಲರೂ ನಿಯಮಾವಳಿಗೇ ಅನುಗುಣವಾಗಿ ಕೆಲಸವನ್ನು ಮಾಡ ಬೇಕಾಗುತ್ತದೆ. ಆದುದರಿಂದ ತಾವೆಲ್ಲರೂ ದಯಮಾಡಿ ಸಹಕರಿಸಬೇಕು. ಈಗ ಮಾನ್ಯ ವಿರೋಧಪಕ್ಷದ ನಾಯಕರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸರ್ಕಾರ ಏನು ಉತ್ತರವನ್ನು ಕೊಡುತ್ತದೆಂಬುದನ್ನು ನೋಡೋಣ. ದಯಮಾಡಿ ಎಲ್ಲರೂ ನಿಮ್ಮ ನಿಮ್ಮ ಸೀಟುಗಳಿಗೆ ಹೋಗಬೇಕು. ನಮ್ಮ ಕರ್ನಾಟಕ ರಾಜ್ಯ ವಿಧಾನಸಭೆಗೆ ತನ್ನದೇ ಆದ ಇತಿಹಾಸವಿದೆ. ನೀವು ಈ ರೀತಿ ಮಾಡುವುದರಿಂದ ಏನೂ ಸಮಸ್ಯೆಗಳು ನಿವಾರಣೆ ಆಗುವುದಿಲ್ಲ. ಈಗ ರಾಜಕೀಯವಾಗಿ ಏನೂ ಆಗುವುದಿಲ್ಲ. ನೀವು ಈ ಸಭೆಯ ನಿಯಮಗಳನ್ನು ಪಾಲನೆ ಮಾಡಿದರೆ, ನಿಮಗೆ ಇನ್ನು ಹೆಚ್ಚಿನ ಗೌರವ ಬರುತ್ತದೆ. ನೀವು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ನೀವು ಒಂದು ಗಂಟೆಯಲ್ಲ. 10 ಗಂಟೆ ಚರ್ಚೆ ಮಾಡಿ. ತಾವು ದಯಮಾಡಿ ನಿಮ್ಮ ನಿಮ್ಮ ಸೀಟುಗಳಿಗೆ ಹೋಗಿ.

ಶ್ರೀ. ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಧರಣಿ, ವಾಕ್‌ಔಟ್ ಮಾಡುವಂಥಾದ್ದು, ಇವೆಲ್ಲಾ ಸಾಮಾನ್ಯವಾದ ಸಂಗತಿಯಾಗಿದೆ.

ಅಧ್ಯಕ್ಷರು: ಇದನ್ನು ಕಂಟಿನ್ಯೂಯಸ್ ಆಗಿ ಮಾಡುವಂಥಾದ್ದು ಅಲ್ಲ.

ಶ್ರೀ. ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಏನು ಉತ್ತರವನ್ನು ಕೊಡುತ್ತಾರೋ, ಕೊಡಲಿ, ನಾವು ಶಾಂತವಾಗಿ ಸಹಕರಿಸುತ್ತೇವೆ. ನಾವು ಡಿಸ್ಟರ್ಬ್ ಮಾಡುವುದಿಲ್ಲ. ನಿಮಗೆ ಇನ್ನು ಏನು ಬೇಕು?

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ಮಾಡುತ್ತಿದ್ದ ಸದಸ್ಯರು ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ ಎಂದು ಘೋಷಣೆ ಮಾಡುತ್ತಿದ್ದರು)

ಶ್ರೀ ಎಸ್.ಎಲ್.ಧರ್ಮೇಗೌಡ: ಕೇಂದ್ರ ಸರ್ಕಾರದಲ್ಲಿ ನಿಮ್ಮ ಸರ್ಕಾರವಿದ್ದಾಗ, ಒಂದು ಬಿಡಿಗಾಸನ್ನು ಕೊಟ್ಟಿದ್ದೀರಾ? ರೈತರ ಸಾಲವನ್ನು ಮನ್ನಾ ಮಾಡಿದ್ದೀರಾ?

(ಸದನದ ಬಾವಿಯಲ್ಲಿ ಸದಸ್ಯರು ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ, ರೈತರ ಬಡ್ಡಿಯನ್ನು ಮನ್ನಾ ಮಾಡಿ ಎಂದು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು: ನೀವು ಎಷ್ಟು ಸಾರಿ ಕೂಗಿದರೂ ಅಷ್ಟೆ, ನೀವು ನಿಮ್ಮ ವಿಚಾರವನ್ನು ಹೇಳಿದ್ದೀರಿ. ಆಯಿತು, ದಯಮಾಡಿ ನಿಮ್ಮ ನಿಮ್ಮ ಸ್ಥಾನಕ್ಕೆ ಹೋಗಿ. ಈಗ ಅರ್ಥ ಸಚಿವರು ಮಾತನಾಡುತ್ತಾರೆ. ಸರ್ಕಾರದ ಪರವಾಗಿ ಉತ್ತರವನ್ನು ಕೊಡುತ್ತಾರೆ.

ಶ್ರೀ. ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಾವು ಹೊಸದಾಗಿ ಏನು ಕೇಳುತ್ತಾ ಇಲ್ಲ. ಮಾನ್ಯ ಸಹಕಾರ ಸಚಿವರು, ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷರನ್ನು ಎಲ್ಲಾ ಕೋ ಆಪರೇಟೀವ್‌ನ ಪ್ರಮುಖರನ್ನು ಕರೆದುಕೊಂಡು ಮಾನ್ಯ ಅರ್ಥ ಸಚಿವರ ಹತ್ತಿರ ಹೋಗಿ ಮನವಿಯನ್ನು ಕೊಟ್ಟಿದ್ದಾರೆ. ಅದು ಆಗಬೇಕೆಂದು ಕೇಳುತ್ತಿದ್ದೇನೆ. ಇದಕ್ಕೆ ಸರ್ಕಾರವೂ ಮಾನಸಿಕವಾಗಿ ಒಪ್ಪಿಕೊಂಡಿದೆ. ಅದನ್ನು ಜಾರಿಗೆ ತಂದಿದ್ದರೆ ಕಾರ್ಯಕಲಾಪಗಳು ನಡೆಯುತ್ತಾ ಇತ್ತು. ಇವರು ನಮ್ಮ ಮಾತನ್ನು ಕೇಳುವುದು ಬೇಡ. ಮಾನ್ಯ ಸಹಕಾರ ಸಚಿವರು, ಮಾನ್ಯ ಅರ್ಥ ಸಚಿವರಿಗೆ ಏನು ಮನವಿಯನ್ನು ಕೊಟ್ಟಿದ್ದಾರೆ. ಅದನ್ನು ಜಾರಿಗೆ ತನ್ನಿ ಎಂದು ಕೇಳುತ್ತಾ ಇದ್ದೇನೆ. ಇಲ್ಲಿ ನಾವು ಹೊಸದಾಗಿ ಏನು ಕೇಳಲಿಲ್ಲ.

ಅಧ್ಯಕ್ಷರು: ಈಗ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಮಾನ್ಯ ಸದಸ್ಯರುಗಳು ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರವೆಂದು ಘೋಷಣೆ ಹಾಕುತ್ತಿದ್ದರು.)

ಶ್ರೀ ಆರ್.ವಿ.ದೇಶಪಾಂಡೆ: ನಿಮಗೆ ಉತ್ತರ ಬೇಡವೇ? ಮಾನ್ಯ ವಿರೋಧಪಕ್ಷದ ನಾಯಕರನ್ನು ಕೇಳುತ್ತೇನೆ, ಉತ್ತರ ಬೇಡವೇ?

ಅಧ್ಯಕ್ಷರು: ದಯಮಾಡಿ ತಾವು ಕುಳಿತುಕೊಳ್ಳಿ, ಈಗ ನಿಮಗೆ ಸರ್ಕಾರದಿಂದ ಉತ್ತರ ಕೊಡುತ್ತಾರೆ. ಮಾನ್ಯ ಸಹಕಾರ ಸಚಿವರು ಇದ್ದಾರೆ. ಉತ್ತರವನ್ನು ಕೊಡಿಸುತ್ತೇನೆ. ದಯಮಾಡಿ ನಿಮ್ಮ ನಿಮ್ಮ ಸೀಟುಗಳಿಗೆ ಹೋಗಿ ಎಂದರೆ ಕೇಳುವುದಿಲ್ಲ. ಇದು ಏನು?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ಒಂದು ಮನವಿಯನ್ನು ಮಾಡುತ್ತೇನೆ. ತಾವು ದಯಮಾಡಿ 10 ನಿಮಿಷಗಳ ಕಾಲ ಸಭೆಯನ್ನು ಮುಂದೂಡಿ. ಚರ್ಚೆ ಮಾಡೋಣ.

ಅಧ್ಯಕ್ಷರು: ಈಗ ಸಭೆಯನ್ನು ಅರ್ಧ ಗಂಟೆಗಳ ಕಾಲ

ಮುಂದೂಡಲಾಗಿದೆ.

(ಸಭೆಯನ್ನು ಅರ್ಧ ಗಂಟೆಯ ಕಾಲ ಮುಂದೂಡಲಾಯಿತು)

(ಸದನವು ಮತ್ತೆ ಮದ್ಯಾಹ್ನ 12 ಗಂಟೆ 34 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು:– ಮಾನ್ಯ ಸಹಕಾರ ಸಚಿವರು ಈಗ ಮಾತನಾಡಲಿ.

ಶ್ರೀ. ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಸನ್ಮಾನ್ಯ ಸಭಾಧ್ಯಕ್ಷರೇ, ಒಂದು ನಿಮಿಷ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ. ತಮ್ಮ ಕೊಠಡಿಯಲ್ಲಿ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಹಣಕಾಸಿನ ಸಚಿವರು ಹಾಗೂ ಮಾನ್ಯ ಸಹಕಾರ ಸಚಿವರ ಸಮಕ್ಷಮದಲ್ಲಿ ಚರ್ಚೆಯಾಗಿ ಒಂದು ರೀತಿಯಲ್ಲಿ ಈ ರಾಜ್ಯದ ರೈತರ ಹಿತದೃಷ್ಟಿಯಿಂದ ಒಂದು ಒಮ್ಮತದ ಅಭಿಪ್ರಾಯಕ್ಕೆ ನಾವು ಬಂದಿದ್ದೇವೆಂದು ತಿಳಿದುಕೊಂಡಿದ್ದೇವೆ. ಸನ್ಮಾನ್ಯ ಸಿದ್ದರಾಮಯ್ಯರವರ ಮನಸ್ಸಿನಲ್ಲಿಯೂ ಕೂಡ ಏನಿದೆ ಎಂದರೆ, ನಾನು ಒಬ್ಬ ರೈತರ ಮಗನಾಗಿ ಈಗ ಇರತಕ್ಕಂಥ ಅವಕಾಶ ಉಪಯೋಗ ಮಾಡಿಕೊಂಡು ರೈತರಿಗೆ ನ್ಯಾಯ ಒದಗಿಸತಕ್ಕಂಥ ಕಳಕಳಿ ಇದೆ ಎಂದು ನಾನು ಭಾವಿಸಿದ್ದೇನೆ. ಇಂಥ ಒಂದು ವಿಷಯದ ಮೇಲೆ ನಾವು ದರ್ಜೆ ಮಾಡತಕ್ಕಂಥ ಕಾಲದಲ್ಲಿ ನಾವೆಲ್ಲರೂ ಕೂಡ ಒಂದು ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೇವೆ. ರಾಜ್ಯದ ರೈತರು ದಿನಾಂಕ 31–03–2004ರ ಒಳಗೆ ಬಡ್ಡಿ ಸಹಿತ ಸಾಲವನ್ನು ಕೊಟ್ಟಿದ್ದರೆ, ಈ ಸರ್ಕಾರಿ ಆಜ್ಞೆಯ ಪ್ರಕಾರ ಬಡ್ಡಿ ವಾಪಸ್ಸು ಕೊಡಬೇಕಾಗುತ್ತದೆ. ಅಥವಾ ಅವರು ತೆಗೆದುಕೊಂಡಿರತಕ್ಕಂಥ ಲೋನ್‌ಗೆ ಅಡ್ಜಸ್ಟ್ ಮಾಡಬೇಕಾಗುತ್ತದೆ. ಇದೇ ರೀತಿಯಾಗಿ ಅನೇಕ ಸಹಕಾರಿ ಸಂಘಗಳು ಬಜೆಟ್‌ನ್ನು ಆಧರಿಸಿ ರೈತರಿಂದ ಬಡ್ಡಿ ತೆಗೆದುಕೊಳ್ಳದೆ 31–03–2005ರವರೆಗೆ ಅಸಲು ತೆಗೆದುಕೊಂಡಿರ ತಕ್ಕಂಥವರಿಗೂ ಕೂಡ ಹೊಸ ಸಾಲ ತೆಗೆದುಕೊಂಡಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಈಗಾಗಲೇ ಸಹಕಾರ ಸಚಿವರ ಮುಂದಾಳತ್ವದಲ್ಲಿ ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷರುಗಳು ಮತ್ತು ಇತರೇ ಪ್ರಮುಖರುಗಳನ್ನು ಜೊತೆಗೆ ಕರೆದುಕೊಂಡು ಹೋಗಿ ಮಾನ್ಯ ಹಣಕಾಸಿನ ಸಚಿವರಿಗೆ ಮನವಿ ಸಲ್ಲಿಸಿ ಈ ಸವಲತ್ತನ್ನು ಕೊಡಿ ಎಂದು ವಿನಂತಿ ಮಾಡಿಕೊಂಡಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿಯೇ ಇವತ್ತು ಚರ್ಚೆಯಾಗಿದೆ.

ಸೆಪ್ಟೆಂಬರ್ ತಿಂಗಳ ಕೊನೆಯವರೆಗೆ ಶಕ್ತಿ ಇರತಕ್ಕಂಥವರು ಯಾರು ಸಾಲ ಕಟ್ಟುತ್ತಾರೆ, ಅವರಿಗೆ ಬಡ್ಡಿ ಇಲ್ಲದೆ ಅಸಲನ್ನು ಮಾತ್ರ ತೆಗೆದುಕೊಳ್ಳುತ್ತೇನೆಂಬ ಬಗ್ಗೆ ಸರ್ಕಾರದವರು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಇದೊಂದು ಕೂಡ ಈ ರಾಜ್ಯದ ರೈತರಿಗೆ ಸಮಾಧಾನ ತಂದಿರತಕ್ಕಂಥದ್ದಾಗಿದೆ. ಮತ್ತೆ ಎರಡನೆಯದಾಗಿ, ಯಾರು ಬಡ್ಡಿ ಕೊಟ್ಟಿದ್ದಾರೆ ಅವರಿಗೆ ಬಡ್ಡಿ ಹಣ ವಾಪಸ್ಸು ಕೊಡಬೇಕು. ಮತ್ತೆ ಯಾರಿಂದ ಬಡ್ಡಿ ತೆಗೆದುಕೊಳ್ಳದೆ ಕೇವಲ ಅಸಲು ತೆಗೆದುಕೊಂಡಿದ್ದಾರೆಯೋ ಅವರಿಗೆ ಸಹಕಾರ ಸಭೆಗಳು ಅಡ್ಜಸ್ಟ್‌ಮೆಂಟ್ ಮಾಡಿಕೊಂಡಿದ್ದರೆ ಅವರಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಕೂಡ ಚರ್ಚೆಯಾಗಿದೆ. ಬಹುಶಃ ಸರ್ಕಾರ ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಇನ್ನು 15 ದಿವಸದೊಳಗೆ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಮತ್ತೆ ಎರಡನೆಯದಾಗಿ ಈಗಾಗಲೇ ಎಲ್ಲಾ ಪ್ರತಿಪಕ್ಷಗಳು ಚರ್ಚೆ ಮಾಡಿರುವಂತೆ ಈ ರಾಜ್ಯದ ರೈತನಿಗೆ 3 ಪರ್ಸೆಂಟ್ ಬಡ್ಡಿ ದರದಲ್ಲಿ ಸಹಕಾರ ಸಂಘಗಳ ಮೂಲಕ ಸಾಲ ಕೊಡತಕ್ಕಂಥ ಒಂದು ಯೋಜನೆಯನ್ನು ಈ ಸರ್ಕಾರ ಮಾಡಿರತಕ್ಕಂಥದು ಈ ದೇಶದ ಬೇರೆ ರಾಜ್ಯದಲ್ಲಿ ಎಲ್ಲಿಯೂ ಕೂಡ ಇಲ್ಲ. ಈ ಒಂದು ಒಳ್ಳೆಯ ಕೆಲಸವನ್ನು ನೀವು ಮಾಡಿದ್ದೀರಿ. ಆದರೆ ಕಳೆದ ನಾಲ್ಕೈದು ವರ್ಷಗಳಿಂದ ಸತತ ಬರಗಾಲಕ್ಕೆ ತುತ್ತಾಗಿರತಕ್ಕಂಥ ರೈತರು ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕವೂ ಕೂಡ 9 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲ ತೆಗೆದು ಕೊಂಡಿದ್ದಾರೆ. ಈಗ ಏನಾಗಿದೆ ಎಂದರೆ, ಅಣ್ಣ ಸಹಕಾರ ಸಂಘಗಳಿಂದ ಸಾಲ ತೆಗೆದುಕೊಂಡಿರತಕ್ಕಂಥದಕ್ಕೆ 6 ಪರ್ಸೆಂಟ್ ಬಡ್ಡಿ ಕಟ್ಟುತ್ತಿದ್ದರೆ, ತಮ್ಮ ನಾದವನು ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಸಾಲ ತೆಗೆದುಕೊಂಡು ಸುಮಾರು 8 ರಿಂದ 9 ಪರ್ಸೆಂಟ್ ಬಡ್ಡಿ ಕಟ್ಟುತ್ತಿದ್ದಾನೆ. ಇದು ಯಾವ ಧರ್ಮ? ಇದಕ್ಕೋಸ್ಕರ ಕೇಂದ್ರ ಸರ್ಕಾರದ ಮನವೊಲಿಸುವುದು ನಿಮ್ಮ ಜವಾಬ್ದಾರಿಯಾಗಿದೆ. ನಾಳೆ ದಿವಸ ಪ್ರತಿಪಕ್ಷದವರೆಲ್ಲರೂ ಸೇರಿ ಈಗಾಗಲೇ ಸರ್ಕಾರ ಒಪ್ಪಿಕೊಂಡಿರುವಂತೆ, ನಿರ್ಣಯದಂತೆ, ಅಂದರೆ, ಸಹಕಾರ ಸಂಘಗಳಲ್ಲಿ ಯಾವರೀತಿಯಾಗಿ 6 ಪರ್ಸೆಂಟ್ ಬಡ್ಡಿದರದಲ್ಲಿ ಸಾಲವನ್ನು ನೀಡುತ್ತಿದ್ದಾರೆಯೋ ಅದೇ ರೀತಿಯಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಕೂಡ 6 ಪರ್ಸೆಂಟ್ ಬಡ್ಡಿ ದರದಲ್ಲಿ ಈ ರಾಜ್ಯದ ರೈತರಿಗೆ ಸಾಲ ಕೊಡತಕ್ಕಂಥ ಒಂದು ಯೋಜನೆಯನ್ನು ಜಾರಿಗೆ ತರಬೇಕೆಂಬ ನಿರ್ಣಯವನ್ನು ಪ್ರತಿಪಕ್ಷದವರೆಲ್ಲಾ ಸೇರಿ ನಾಳೆದಿವಸ ಇದನ್ನು

ಇಲ್ಲಿ ಮಂಡನೆ ಮಾಡುತ್ತೇವೆ. ಸರ್ಕಾರ ಕೂಡ ಇದಕ್ಕೆ ಒಪ್ಪಿಕೊಂಡಿದೆ. ಈ ಒಂದು ಹಿನ್ನೆಲೆಯಲ್ಲಿ ಮಾನ್ಯ ಹಣಕಾಸಿನ ಸಚಿವರು ಹಾಗೂ ಮಾನ್ಯ ಸಹಕಾರ ಸಚಿವರ ಜೊತೆಯಲ್ಲಿ ಈಗ ಏನು ಮಾತುಕತೆಯಾಯಿತೋ ಅದರ ಬಗ್ಗೆ ಸ್ಪಷ್ಟವಾದ ಭರವಸೆ ಈಗ ಕೊಟ್ಟರೆ ಇವತ್ತು ಇಲ್ಲಿ ಏನಾಗುತ್ತದೆಯೋ ಎಂದು ಈ ರಾಜ್ಯದ ರೈತರು ಏನು ಕಾತುರದಿಂದ ನೋಡುತ್ತಿದ್ದಾರೆಯೋ ಅವರಿಗೆ ಅನುಕೂಲವಾಗುತ್ತದೆ. ಅಲ್ಲಿ ಚರ್ಚೆಯಾಗಿರತಕ್ಕಂಥದ್ದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವಂಥ ದೃಷ್ಟಿಯಿಂದ ಉಪಮುಖ್ಯಮಂತ್ರಿ ಯಾಗಿರತಕ್ಕಂಥ ಮಾನ್ಯ ಸಿದ್ದರಾಮಯ್ಯನವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಹಕಾರ ಸಚಿವರು, ಆಡಳಿತ ಪಕ್ಷದವರು ಒಟ್ಟಿಗೆ ಸೇರಿ ಇವತ್ತು ರೈತರ ಹಿತದೃಷ್ಟಿಯಿಂದ ಮತ್ತು ಆತನಿಗೆ ಅನುಕೂಲಕರವಾಗಲೆಂದು ಒಂದು ನಿರ್ಣಯ ತೆಗೆದುಕೊಂಡಿರುವುದರಿಂದ ನಾವು ನಮ್ಮ ಧರಣಿಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ದಯಮಾಡಿ ಸ್ಪಷ್ಟವಾದ ಒಂದು ಭರವಸೆಯನ್ನು ಮಾನ್ಯ ಸಹಕಾರ ಸಚಿವರಾಗಲಿ ಅಥವಾ ಮಾನ್ಯ ಸಿದ್ದರಾಮಯ್ಯನವರಾಗಲಿ

ಶ್ರೀ ಜೆ.ಸಿ.ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ):– ಮಾನ್ಯ ಅಧ್ಯಕ್ಷರೆ, ಈ ಒಂದು ವಿಷಯದ ಬಗ್ಗೆ ಒಮ್ಮತಕ್ಕೆ ಬಂದಿರತಕ್ಕಂಥದ್ದನ್ನು ನಾನೂ ಕೂಡ ಸ್ವಾಗತಿಸುತ್ತೇನೆ. ಮಾನ್ಯ ಸಿದ್ದರಾಮಯ್ಯನವರನ್ನು ನಾನು ಅವತ್ತೂ ಕೂಡ ಮೆಚ್ಚಿ ಮಾತನಾಡಿದ್ದೇನೆ. ಮತ್ತೆ ಇವತ್ತು ಕೂಡ ಮೆಚ್ಚಿಕೊಂಡು ಮಾತನಾಡತಕ್ಕಂಥ ಅನಿವಾರ್ಯವಾಗಿದೆ. ಇವತ್ತಿನ ದಿವಸ ರಾಜಕೀಯ ಬೇರೆ, ರೈತರ ಸಮಸ್ಯೆಗಳು ಬೇರೆ. ಈ ಸರ್ಕಾರ ಬಂದ ಮೇಲೆ ಅಕಸ್ಮಾತ್ ಒಂದು ಒಳ್ಳೆಯ ಕೆಲಸವಾಗಿರತಕ್ಕಂಥದ್ದು. ಏನೆಂದರೆ, ಇವತ್ತಿನ ದಿವಸ ರೈತರು ಜೀವನ ಮಾಡುವಂಥ ಸ್ಥಿತಿಯನ್ನು ನಿರ್ಮಾಣ ಮಾಡಿಕೊಟ್ಟಿರ ತಕ್ಕಂಥದು. ಇವತ್ತಿನ ದಿವಸ ಎಲ್ಲರಿಗೂ ಒಂದು ರೀತಿಯ ಭಾವನೆ ಬರುತ್ತದೆ. ಅದೇನೆಂದರೆ, ಹಣ ಕಟ್ಟಿರುತಕ್ಕಂಥದ್ದೆ ತಪ್ಪಾಯಿತು. ಮುಂದಿನ ಸಾರಿಯಿಂದ ಕಟ್ಟದೆ ಇರತಕ್ಕಂಥದ್ದು ಒಳ್ಳೆಯದು ಎಂಬ ಭಾವನೆ ಬರುತ್ತದೆ. ಅಂದರೆ, ಬಂಡರಾಗಿ ಬದುಕುವುದೇ ಶ್ರೇಷ್ಠ ಎಂಬ ಭಾವನೆಗೆ ಬಂದು ಬಿಡುತ್ತಾರೆ. ನೀವು ಇದೇ ರೀತಿಯಾಗಿ ಮುಂದುವರಿಸಿಕೊಂಡು ಹೋದರೆ ಈಗ ಏನು ಕಟ್ಟಿದ್ದಾರೆ ಅವರೂ ಕೂಡ ಈ ಒಂದು ವರ್ಷದೊಳಗೆ ಅಕಸ್ಮಾತ್ ಅವರೂ ಕೂಡ ಬರಗಾಲದ ಬವಣೆಯಲ್ಲಿ ಇದ್ದು ಕಟ್ಟಿದ್ದರೆ, ಬಹಳಷ್ಟು ಜನ ಸುಭಿಕ್ಷೆಯಲ್ಲಿದ್ದು ಕಟ್ಟಿದ್ದಾರೆ ಎನ್ನುತ್ತಕ್ಕಂಥ

ಭಾವನೆ ಸರ್ಕಾರ ಇಟ್ಟುಕೊಳ್ಳಬೇಕಾಗುತ್ತದೆ. ಅವರು ಈಗ ಏನು ಮಾತು ಕೊಡುತ್ತಾರೆಂದು ಅಥವಾ ತಮ್ಮ ಕಛೇರಿಯೊಳಗೆ ಏನು ತೀರ್ಮಾನವಾಗಿದೆ ಅದರ ಪ್ರಕಾರ ಇನ್ನು 15–20 ದಿವಸದೊಳಗೆ ಸರ್ಕಾರ ಇಲ್ಲಿ ಒಂದು ಹೇಳಿಕೆ ಕೊಡುತ್ತೇವೆಂದು ಹೇಳಿದೆ. ಇವತ್ತಿನ ದಿವಸ ನಿಜವಾಗಿಯೂ ಕೂಡ ಯಾವುದೇ ಪ್ರತಿಷ್ಠೆಯನ್ನು ವಿರೋಧ ಪಕ್ಷವಾಗಲಿ ಅಥವಾ ಆಡಳಿತ ಪಕ್ಷವಾಗಲಿ ಮನಸ್ಸಿಗೆ ಇಟ್ಟುಕೊಳ್ಳದೆ ಈ ರಾಜ್ಯದ ರೈತರ ಹಿತದೃಷ್ಟಿಯಿಂದ ಒಂದು ತೀರ್ಮಾನಕ್ಕೆ ಬರಬೇಕು. ನಾವು ಮಾಡುತ್ತೇವೆ ನೀವು ಮಾಡುತ್ತೇವೆಂದು ಎಂಬುದು ಬೇರೆ. ಇವತ್ತಿನದಿವಸ ಹಳ್ಳಿ ಜನ, ಕೃಷಿ ನಂಬಿಕೊಂಡಿರತಕ್ಕಂಥ ರೈತ ಬದುಕಬೇಕಾಗಿದೆಯಷ್ಟೆ. ಇವರ ಬಗ್ಗೆ ಇನ್ನೊಂದಿಷ್ಟು ಅನುಕಂಪ ಇಟ್ಟುಕೊಳ್ಳಬೇಕು. ಬೇರೆ ಎಲ್ಲಿಯೂ ಕೂಡ ಜೀವನ ಮಾಡತಕ್ಕಂಥ ಸ್ಥಿತಿ ರೈತರಿಗೆ ಇಲ್ಲದೆ ಇರುವಾಗ ಸಾಲ ಕಟ್ಟಿರ ತಕ್ಕಂಥವರೂ ಕೂಡ ಎಲ್ಲಿಂದಲೋ ಹಣ ತಂದು ಕಟ್ಟಿರುತ್ತಾರೆ. ಇದರ ಜೊತೆಗೆ ಇನ್ನು ಅನೇಕ ಸ್ಕೀಂಗಳನ್ನು ತಾವು ಬಿಟ್ಟಿದ್ದೀರಿ. ಪಿ.ಎಲ್.ಡಿ. ಅಥವಾ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡಿರತಕ್ಕಂಥವರನ್ನು ಇದರಲ್ಲಿ ಸೇರಿಸಬೇಕೆಂದು ತೀರ್ಮಾನ ತೆಗೆದುಕೊಂಡು ಈ ಶಾಸನಸಭೆಯಲ್ಲಿ ಇದರ ಬಗ್ಗೆ ಉತ್ತರ ಹೇಳಬೇಕೆಂದು ಹೇಳುತ್ತಾ, ಈಗ ನಾವು ಏನೊಂದು ರಾಜಿ, ಒಡಂಬಡಿಕೆಗೆ ಬಂದಿದ್ದೇವೆಯೋ ಅದನ್ನು ನಾನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):– ಮಾನ್ಯ ಅಧ್ಯಕ್ಷರೇ, ಧರಣಿ ಅಂತ್ಯ ಆಗಬೇಕೆಂಬುದು ನನ್ನ ಇಚ್ಛೆ. ಅನೇಕ ವಿಚಾರಗಳನ್ನು ಅಂದರೆ ಪ್ರಶ್ನೋತ್ತರ ವೇಳೆಯಲ್ಲಿ ಅನೇಕ ಪ್ರಶ್ನೆಗಳ ಬಗ್ಗೆ ಮತ್ತು ಅನೇಕ ಇಲಾಖೆಯ ಬೇಡಿಕೆಗಳ ಬಗ್ಗೆ ಮುಂದಿನ ತಿಂಗಳು 5ನೇ ತಾರೀಖಿನವರೆಗೆ ಚರ್ಚೆಯಾಗಬೇಕಾಗಿದೆ. ಈ ಒಂದು ದೃಷ್ಟಿಯಿಂದ ಧರಣಿ ಮತ್ತೆ ಮುಂದುವರೆದರೆ ಒಂದು ಒಳ್ಳೆಯ ವಾತಾವರಣ ನಿರ್ಮಾಣವಾಗುವುದಿಲ್ಲ ವೆಂದು ನಾನು ಬಹಳ ಪ್ರಯತ್ನಪಟ್ಟು ಎರಡು ಕಡೆಯಿಂದಲೂ ಒಂದು ಒಮ್ಮತಕ್ಕೆ ತರಬೇಕೆಂದು ತಮ್ಮ ಅಧ್ಯಕ್ಷತೆಯಲ್ಲಿ ನಾವೆಲ್ಲಾ ಒಂದು ತೀರ್ಮಾನಕ್ಕೆ ಬಂದಿದ್ದೇವೆ, ಈ ಒಮ್ಮತಕ್ಕೆ ನಾನು ಬಹಳ ಪ್ರಯತ್ನ ಪಟ್ಟಿದ್ದೇನೆ. ನನಗಂತೂ ಇದರಿಂದ ಬಹಳ ಸಂತೋಷವಾಯಿತು. ಹಾಗೆಯೇ ಮಾನ್ಯ

ಯಡಿಯೂರಪ್ಪನವರು ಮತ್ತು ಸರ್ಕಾರ ಒಂದು ಹಂತಕ್ಕೆ ಬಂದಿದೆ. ಈ ದೃಷ್ಟಿಯಿಂದ ಮುಂದೆ ಪ್ರಶ್ನೋತ್ತರ ಕಾಲ ಮತ್ತು ಅನೇಕ ಬೇಡಿಕೆಗಳ ಮೇಲೆ ಚರ್ಚೆಯಾಗಬೇಕಾಗಿದೆ. ಇನ್ನು 20 ದಿವಸದೊಳಗೆ ಸರ್ಕಾರ ರೈತರ ಬಗ್ಗೆ ಸಮಗ್ರವಾಗಿ ಚಿಂತನೆ ನಡೆಸಿ, ರೈತರಿಗೆ ಯಾವ್ಯಾವ ಅನುಕೂಲಗಳು ಬೇಕೆಂಬುದರ ಬಗ್ಗೆ ಮತ್ತು ನಾವು ಏನೇನು ಬೇಡಿಕೆಗಳನ್ನು ಇವರ ಪರವಾಗಿ ಮಂಡಿಸಿದ್ದೇವೆಯೋ ಅದರ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆ, ಸಚಿವಸಂಪುಟ ಸಭೆ ಕರೆಯುತ್ತೇವೆ. ಅಧಿಕಾರಿಗಳ ಸಭೆ ಕರೆದು ಇದರ ಬಗ್ಗೆ ಮಾತನಾಡಿ ಇನ್ನು 20 ದಿವಸದೊಳಗೆ ಈ ಸದನದಲ್ಲಿ ಮತ್ತೆ ನಾವು ಬಂದು ಇದರ ಬಗ್ಗೆ ಹೇಳಿಕೆಯನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ (ಮು) 20ನೇ ತಾರೀಖಿನೊಳಗೆ, ಅಂದರೆ ಟೈಮ್ ಗಳಿಗೆ ನೋಡುವುದಕ್ಕಾಗುವುದಿಲ್ಲ. ಅರ್ಧ ಗಂಟೆ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತದೆ. ಅದರ ಬಗ್ಗೆ ನಾವೇನು ಚಿಂತನೆಯನ್ನು ಪಡುವುದಕ್ಕಾಗುವುದಿಲ್ಲ. ಆ ತೀರ್ಮಾನಕ್ಕೆ ಬಂದಿದ್ದೇವೆ, ಮತ್ತು ಸರ್ಕಾರ ರೈತರ ವಿರೋಧವಾಗಿದೆ ಎಂದು ನಾವು ಹೇಳುವುದಕ್ಕೆ ತಯಾರಾಗಿಲ್ಲ. ನಾವು ಅವರು ಒಟ್ಟಿಗೆ ಸೇರಿ ಇದರಲ್ಲಿ ನಾವು ಒಂದು ಒಮ್ಮತವಾದ ಅಭಿಪ್ರಾಯಕ್ಕೆ ಬಂದು, ರೈತರಿಗೆ ಏನೇನು ಅನುಕೂಲವಾಗಬೇಕು ಎನ್ನುವುದರ ಬಗ್ಗೆ ನಾವೆಲ್ಲಾ ಒಂದು ತೀರ್ಮಾನಕ್ಕೆ ಬಂದಿದ್ದೇವೆ, ಸುಗಮವಾಗಿ ಸದನ ನಡೆಯುವುದಕ್ಕೆ ಅವಕಾಶವಾಗಬೇಕು. ಆ ದೃಷ್ಟಿಯಿಂದ ನಮ್ಮ ಮಾನ್ಯ ಅಧ್ಯಕ್ಷರಿಗೆ 10 ನಿಮಿಷ ಸದನವನ್ನು ಮುಂದಕ್ಕೆ ಹಾಕಿ ಎಂದು ಹೇಳಿದ್ದೆ. ಇದು ಒಂದು ತೀರ್ಮಾನಕ್ಕೆ ಬರಲಿ ಎಂದು, ಆ ಒಂದು ತೀರ್ಮಾನಕ್ಕೆ ಬಂದಿದೆ, ಒಂದು ಒಳ್ಳೆಯ ವಾತಾವರಣಕ್ಕೆ ಬಂದಿದ್ದೇವೆ. ಮಾನ್ಯ ಸರ್ಕಾರ ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ಹೇಳಿ ತಮ್ಮ ಮೂಲಕ ನಾನು ಕಳಕಳಿಯ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಪ್ರಾರಂಭವಾದ ದಿನದಿಂದಲೇ ನಾವು ಸರ್ಕಾರವನ್ನು ಒತ್ತಾಯ ಮಾಡಿದ್ದೇವೆ. ನಾವು ಎರಡು ವಿಚಾರದ ಬಗ್ಗೆ ಸರ್ಕಾರವನ್ನು ಒತ್ತಾಯ ಮಾಡಿರುತ್ತೇವೆ. ಅವಧಿಯನ್ನು ವಿಸ್ತರಣೆ ಮಾಡಬೇಕು. ಮತ್ತು ರೈತ ಕಟ್ಟಿರತಕ್ಕಂಥ ಬಡ್ಡಿಯನ್ನು

ವಾಪಸ್ಸು ಕೊಡಬೇಕು. ಈ ವಿಚಾರ ಏಕೆ ಪ್ರತ್ಯೇಕವಾಗಿ ಪ್ರಸ್ತಾಪ ಮಾಡಬೇಕಾಯಿತೆಂದರೆ, ಪ್ರಾಮಾಣಿಕವಾಗಿ ಕಟ್ಟಿದವರಿಗೆ ಲಾಭವಿಲ್ಲವೆನ್ನ. ತಕ್ಕಂಥ ಅಭಿಪ್ರಾಯಕ್ಕೆ ಒಂದು ಕೆಟ್ಟ ಮೆಸೇಜ್ ರೈತರಿಗೆ ಹೋಗಬಾರದು ಎನ್ನತಕ್ಕಂಥದ್ದು ಅದರ ಹಿಂದೆ ಇರತಕ್ಕಂಥ ಒಂದು ಉದ್ದೇಶ. ಅಪ್ರಾಮಾಣಿಕವಾಗಿ ಮಾತ್ರ ಪ್ರಯೋಜನವಾಗುತ್ತದೆ. ಆ ಪ್ರಾಮಾಣಿಕರಿಗೆ ಪ್ರಯೋಜನವಾಗುವುದಿಲ್ಲ. ಅದರ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಕೂಡ ಅದನ್ನು ಪರಿಗಣನೆ ಮಾಡುತ್ತೇವೆಂದು ಹೇಳಿದರು. ಈಗಲೂ ಕೂಡ ಇಷ್ಟು ಹೋರಾಟವಾದ ಮೇಲೆ ಸರ್ಕಾರ ಮತ್ತು ಪ್ರತಿಪಕ್ಷದ ಮಧ್ಯೆ ಅದೊಂದು ಒಪ್ಪಂದವಾಗಿದೆ. ಪ್ರಾರಂಭದಿಂದಲೂ ಮಾನ್ಯ ಸಿದ್ದರಾಮಯ್ಯ ನವರು ರೈತರ ಪರವಾಗಿ ಮಾತನಾಡುತ್ತಾ ಬಂದಿದ್ದಾರೆ. ಅವರ ಪ್ರಾಮಾಣಿಕತೆ ಮತ್ತು ಬದ್ಧತೆ ಬಗ್ಗೆ ಎಲ್ಲೂ ಅನುಮಾನವೂ ಇಲ್ಲ ಮತ್ತು ಅವರ ಪ್ರಾಮಾಣಿಕತೆಯನ್ನು ನಾವು ಪ್ರಶ್ನೆ ಮಾಡುವುದಿಲ್ಲ. ರೈತರ ವಿಚಾರದಲ್ಲಿ ನಮಗೆ ಎಷ್ಟು ಕಾಳಜಿ ಇದೆ, ಅವರಿಗೂ ಅಷ್ಟೇ ಪ್ರಾಮಾಣಿಕವಾದ ಕಾಳಜಿ ಇದೆ. ಅದಕ್ಕೋಸ್ಕರ ಇಡೀ ರಾಜ್ಯದಲ್ಲಿ ಮೊದಲನೆಯ ಬಾರಿಗೆ ರೈತರಿಗೆ 6 ಪರ್ಸೆಂಟ್‌ನಲ್ಲಿ ಇಂಟ್ರೆಸ್ಟ್ ಕೊಡಬೇಕು ಎಂದು ಹೇಳತಕ್ಕಂಥದ್ದು, ಸರ್ಕಾರದ ಕೋ–ಆಪರೇಟೀವ್ ಬ್ಯಾಂಕ್ಸ್ 6 ಪರ್ಸೆಂಟ್‌ನಲ್ಲಿ ಸಾಲವನ್ನು ಕೊಡಬೇಕು ಎಂದು ತೀರ್ಮಾನ ಮಾಡಿದ್ದರಲ್ಲಿ ಇಡೀ ದೇಶದಲ್ಲಿ ಇದೆ ಮೊದಲನೆಯ ಸರ್ಕಾರ. ಅದಕ್ಕೆ ನಾವೆಲ್ಲರೂ ಇಡೀ ರಾಜ್ಯದ ರೈತರು ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಅವರಿಗೆ ಕಾಳಜಿ ಇದೆ, ಆದರೆ ಒಬ್ಬ ಸರ್ಕಾರ ನಡೆಸತಕ್ಕಂಥ ಅರ್ಥ ಮಂತ್ರಿಯಾಗಿ ಕೆಲವು ಪರಿಸ್ಥಿತಿಗಳು ಇರುತ್ತವೆ. ಆದರೂ ಕೂಡ ನಾವು ಒತ್ತಾಯ ಮಾಡತಕ್ಕಂಥದ್ದು ಸತತವಾಗಿ ನಾಲ್ಕು ವರ್ಷಗಳಿಂದ ಬರಗಾಲದಿಂದ ತತ್ತರಿಸತಕ್ಕಂಥ ನಮ್ಮ ರೈತರಿಗೆ ಇವತ್ತು ನಾವು ಏನಾದರೂ ಮಾಡದೇ ಹೋದರೆ ನಮ್ಮನ್ನು ಅವರು ಕ್ಷಮಿಸುವುದಿಲ್ಲ. ನೀವು ಸರ್ಕಾರದಲ್ಲಿರಲಿ ಅಥವಾ ನಾವು ವಿರೋಧ ಪಕ್ಷದಲ್ಲಿರಲಿ ನಮ್ಮನ್ನು ರೈತರು ಕ್ಷಮಿಸುವುದಿಲ್ಲ. ಏಕೆಂದರೆ, ಅವರು ಕಷ್ಟದಲ್ಲಿದ್ದಾರೆ. ಈಗ ಏನು ಬಡಂಬಡಿಕೆ ಯಾಗಿದೆ ನಾನು ಮತ್ತೆ ತಮ್ಮ ಮುಖಾಂತರ ಸರ್ಕಾರವನ್ನು ಕೇಳತಕ್ಕಂಥದ್ದು ಹೇಳಿಕೆಯನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅದನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ರೈತರ ಪರವಾಗಿ ಹೇಳಿಕೆಯನ್ನು ಕೊಡಬೇಕೆಂದು ಒತ್ತಾಯವನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ಪ್ರಥಮವಾಗಿ ಮಾನ್ಯ ಸಿದ್ದರಾಮಯ್ಯನವರನ್ನು ಸರ್ಕಾರದ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ರೈತರಿಗೆ 6 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲವನ್ನು ಕೊಡತಕ್ಕಂಥದ್ದೂ ಮತ್ತು ಬಡ್ಡಿಯನ್ನು ಮನ್ನಾ ಮಾಡಿದ್ದು ಕೇವಲ ಜೂನ್ 31ರವರೆಗೆ ಅವಧಿ ಇರುವುದನ್ನು ವಿಸ್ತರಣೆ ಮಾಡಿ ಸೆಪ್ಟೆಂಬರ್ 30ರವರೆಗೆ ತೆಗೆದುಕೊಂಡು ಹೋಗಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದರೊಟ್ಟಿಗೆ ಕೆಲವು ಬೇಡಿಕೆಗಳನ್ನು ಇಡುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ. ಅಡಕೆ, ತೆಂಗು ಬೆಳೆಗಾರರಿಗೂ ಕೂಡ ಇದನ್ನು ವಿಸ್ತರಣೆ ಮಾಡಬೇಕು. ಅದರೊಟ್ಟಿಗೆ ನಾನು ಹೇಳುವುದು ಇಡೀ ರಾಜ್ಯದ ಮೀನು ಗಾರರು ಬರಗಾಲದಲ್ಲಿ ತತ್ತರಿಸಿ ಹೋಗಿದ್ದಾರೆ. ಅವರ ಮೀನುಗಾರಿಕೆಯ ಎಲ್ಲ ಚಟುವಟಿಕೆಗಳು ಈ ಸಹಕಾರ ಸಂಘಗಳ ಮುಖೇನ ಆಗುತ್ತಿದೆ. ಅದಕ್ಕಾಗಿ ಅವರದ್ದನ್ನು ಇದರಲ್ಲಿ ಪರಿಗಣಿಸಬೇಕು. ಕರಾವಳಿ ಮೀನುಗಾರರ ಮತ್ತು ಮಹಿಳಾ ಮೀನುಗಾರರ ಸಾಲದ ಬಗ್ಗೆ ಈ ಪ್ರಮಾಣದಲ್ಲಿ ಅದು ಕೋಟ್ಯಾಂತರ ರೂಪಾಯಿಗಳಿಗೆ ಬರುವುದಿಲ್ಲ. ಅದನ್ನು ತಾವು ಗಣನೆಗೆ ತೆಗೆದುಕೊಂಡು ಇದರಲ್ಲಿ ಸೇರಿಸಿ ಬಡ್ಡಿಯನ್ನು ಮನ್ನಾ ಮಾಡುವಂಥದ್ದು ಮತ್ತು ಸೆಪ್ಟೆಂಬರ್ 30ರವರೆಗೆ ವಿಸ್ತರಿಸುವುದು. ಮಾನ್ಯ ಸಿದ್ದರಾಮಯ್ಯನವರು ಕೆಲವು ಗಿಲ್ಮೆಟ್‌ಗಳವರಿಗೆ ಕೊಟ್ಟಿದ್ದೇವೆ. ಅದನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಣೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾ, ಪುನಃ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈಗಾಗಲೇ ಅವರು ಏನು ಹೇಳಿದ್ದಾರೆ. ಸಾಲವನ್ನು ಕಟ್ಟಿದವರಿಗೆ ನಮ್ಮ ಭಾಗದಲ್ಲಿ ವಿಶೇಷವಾಗಿ ಸಾಲವನ್ನು ಮರುಪಾವತಿ ಮಾಡುವುದರಲ್ಲಿ ಪ್ರಥಮವಾಗಿ ಕಟ್ಟಿದ್ದಾರೆ: ಅದಕ್ಕಾಗಿ ಅವರಿಗೆ ಮರುಪಾವತಿಯನ್ನು ಮಾಡಬೇಕು ಅಥವಾ ಮುಂದಿನ ಅವರ ಸಾಲದ ಅವಧಿಯಲ್ಲಿ ಅಡ್ಜಷ್ಟಮೆಂಟ್‌ನಲ್ಲಿ, ಏಕೆಂದರೆ ಮುನ್ಸಿಪಲ್ ಟ್ಯಾಕ್ಸ್‌ನಲ್ಲಿ ಇದರ ಬಗ್ಗೆ ಚರ್ಚೆಯಾಗಿ ಈಗಾಗಲೇ ಕಟ್ಟಿದ್ದನ್ನು ಮುಂದಿನ ಎರಡು ವರ್ಷಗಳಲ್ಲಿ ಅಡ್ಜಷ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ಅದೇರೀತಿ ತಾವು ಸಹಕಾರಿ ಸಂಸ್ಥೆಗಳಲ್ಲಿ ಮಾಡುವುದಕ್ಕೆ ಸಾಧ್ಯವಾದರೆ ಅದನ್ನು ಕನ್ಸಿಡರ್ ಮಾಡಬೇಕೆಂದು ಕೇಳಿಕೊಳ್ಳುತ್ತಾ, 15–20 ದಿವಸಗಳಲ್ಲಿ ಸರ್ಕಾರ ಇದರ ಬಗ್ಗೆ ಸದನಕ್ಕೆ ಉತ್ತರವನ್ನು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು ಉತ್ತರವನ್ನು ಹೇಳುತ್ತಿದ್ದಾರೆ. ಮಾನ್ಯ ಉಪ. ಮುಖ್ಯಮಂತ್ರಿಯವರು ಹೇಳಲಿ.

ಶ್ರೀ ಆರ್.ವಿ. ದೇಶಪಾಂಡೆ(ಮಾನ್ಯ ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡಿ ಕೊಂಡು ಬಂದಿರುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ನಮ್ಮ ಪರವಾಗಿ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಮೆಮೊರಾಂಡಮ್ ಕೊಟ್ಟು ಬಿಟ್ಟಿದ್ದರಿಂದ ಉತ್ತರವನ್ನು ಅವರು ಹೇಳಲಿ ಎಂದು ಕೇಳುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ನನ್ನ ನಂತರ ಅವರು ಹೇಳುತ್ತಾರೆ. ದಯಮಾಡಿ ಒಂದು ನಿಮಿಷ, ಅವರು, ನಾವು ಮಾತನಾಡಿ ಬಂದಿರುತ್ತೇವೆ. ಹಣಕಾಸು ಅವರೆ ಕೊಡಬೇಕಾಗಿರುವುದರಿಂದ ಅವರೇ ಹೇಳಬೇಕು. ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಮಾಧುಸ್ವಾಮಿ ಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಜಯಪ್ರಕಾಶ್ ಹೆಗಡೆಯವರು ಮತ್ತು ಶ್ರೀ ರಾಮರೆಡ್ಡಿಯವರು ರೈತರ ಪರವಾಗಿ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಒಂದು ಸಂತೋಷದ ಸಂಗತಿ ಎಂದರೆ ಪಕ್ಷಾತೀತವಾಗಿ ಎಲ್ಲಾ ವಿರೋಧಪಕ್ಷದ ನಾಯಕರು, ಸರ್ಕಾರ ರೈತ ವಿರೋಧಿ ಇಲ್ಲ ಎಂದು ಒಪ್ಪಿಕೊಂಡಿದ್ದೀರಿ. ರೈತರ ಪರವಾಗಿ ಹಲವಾರು ಒಳ್ಳೆಯ ಯೋಜನೆಗಳನ್ನು ತಾವು ತಂದ್ದಿದ್ದೀರಿ ಎಂದು ತಾವು ಒಪ್ಪಿಕೊಂಡಿದ್ದೀರಿ. ರಾಜ್ಯದಲ್ಲಿ 6 ಪರ್ಸೆಂಟ್ ಬಡ್ಡಿದರದಲ್ಲಿ ಸಾಲ ಕೊಡುವುದು ಸಮ್ಮಿಶ್ರಸರ್ಕಾರವಾದ ಶ್ರೀ ಧರ್ಮಸಿಂಗ್ ಹಾಗೂ ಶ್ರೀ ಸಿದ್ದರಾಮಯ್ಯ ಸರ್ಕಾರವೆಂದು ತಾವು ಒಪ್ಪಿಕೊಂಡಿದ್ದೀರಿ, ಅವೆಲ್ಲವು ಖಂಡಿತವಾಗಿ ಒಳ್ಳೆಯ ಸಲಹೆಗಳಾಗಿವೆ. ಸರ್ಕಾರ ರೈತರ ಪರ ಇದ್ದಾಗ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ. ಮೊನ್ನೆ ಶುಕ್ರವಾರ ನಮ್ಮ ಸ್ನೇಹಿತರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ತಮ್ಮ ಸಲಹೆ ತಾವು ಹೇಳಿದಹಾಗೆ ಮೆಮೋರ್ಯಾಂಡಮ್ ಅಲ್ಲ, ನಾನು ನಮ್ಮ ಇಲಾಖೆಯಿಂದ 2 ತಿಂಗಳ ಹಿಂದೆಯೇ ಈ ಸಲಹೆಗಳನ್ನು ಕಳುಹಿದ್ದೇನೆ. ತಾವು ಇವತ್ತು ಏನು ಪ್ರಸ್ತಾಪ ಮಾಡಿದ್ದೀರಿ, ಆ ಎಲ್ಲಾ ವಿಚಾರಗಳು ಮೀನುಗಾರರಿಗೆ ಸಾಲದಿಂದ

ಬಡ್ಡಿಯನ್ನು ಮುಕ್ತಮಾಡುವುದು ಇರಬಹುದು. ಕಾಫಿ ಬೆಳೆಗಾರರಿಗೆ ಸಹಾಯವನ್ನು ಮಾಡಿದ್ದರೂ ಸಹ ಇನ್ನು ಸಮಸ್ಯೆಗಳು ಇವೆ. ತೆಂಗುಬೆಳೆಗಾರರಿಗೆ ಸಮಸ್ಯೆಗಳು ಕೂಡ ಇವೆ, ನಮ್ಮ ಕೋಕೊನಟ್ ಸಮಸ್ಯೆ ಇದೆ, ಪೌಲ್ಟ್ರಿ ಸಮಸ್ಯೆಗಳು ಇದೆ, ಲಿಫ್ಟ್‌ಇರಿಗೇಷನ್ ಸಮಸ್ಯೆ ಇದೆ. ಫಾರ್ಮರ್ ಸಮಸ್ಯೆಗಳು ಇದೆ, 1–4–2004 ರಿಂದ 31–3–2005ರ ತನಕ ಯಾವ ರೈತರು ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಿದ್ದಾರೆ ಅವರಿಗೆ ಪ್ರಿನ್ಸಿಪಲ್‌ನ್ನು ಅಡ್ಜಸ್ಟ್ ಮಾಡಿ ಬಡ್ಡಿ ದುಡ್ಡನ್ನು ವಾಪಸ್ಸು ಕೊಡಿ, ಅಥವಾ ಅಡ್ಜಸ್ಟ್ ಮಾಡಿ ಎಂದು ತಾವು ಹೇಳುವುದು. ಈ ಎಲ್ಲಾ ವಿಚಾರಗಳ ಬಗ್ಗೆ ಮೆಮೋರ್ಯಾಂಡಮ್ ಮತ್ತು ನಮ್ಮ ಸಹಕಾರಿ ಸ್ನೇಹಿತರು ಮೊನ್ನೆ ಬಂದಾಗ ಕೊಟ್ಟಿರಬಹುದು. ಆದರೆ ನಮ್ಮ ಇಲಾಖೆಯಿಂದ ಕಳೆದ ಎರಡು ತಿಂಗಳಿಂದ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಪ್ರವಾಸದಲ್ಲಿದ್ದಾಗ ಈ ವಿಚಾರ ಬಂದಾಗ ಇವರ ಬಗ್ಗೆ ಚಿಂತನೆಯನ್ನು ಮಾಡಿ ನಾವು 29ನೇ ತಾರಿಖು ಇದರ ಬಗ್ಗೆ ಮೀಟಿಂಗ್ ಕೂಡ ಆಗಬೇಕಾಗಿತ್ತು, ಆದರೆ ಗೌರವಾನ್ವಿತ ನಮ್ಮ ಉಪಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳ ಪರವಾಗಿ ಒಂದು ಸಭೆಯನ್ನು ಡೆಲ್ಲಿಯಲ್ಲಿ ಅಟೆಂಡ್ ಮಾಡಬೇಕಾಗಿತ್ತು, ಹಾಗಾಗಿ ಅದನ್ನು ಮಾಡುವುದ ಕ್ಕಾಗಲಿಲ್ಲ. ತಾವು ಮುಖ್ಯವಾಗಿ ರಿಸರ್ವೇಶನ್ ಬಗ್ಗೆ ಹೇಳಿದ್ದೀರಿ, ಮೊನ್ನೆ ನಾವು ಮತ್ತು ಅವರು ಹೇಳಿದ್ದೇವೆ, ಇದನ್ನು ಯಾರು ವಿರೋಧ ಮಾಡುತ್ತಾರೆ. ರೈತರಿಗೆ ನಾವೇ 6 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲವನ್ನು ಕೊಡುವಾಗ ರಾಷ್ಟ್ರೀಕೃತ ಬ್ಯಾಂಕ್ ಮತ್ತು ಆರ್‌ಆರ್‌ಬಿಯು ಸಹ 6 ಪರ್ಸೆಂಟ್ ದರದಲ್ಲಿ ರೈತರಿಗೆ ಸಾಲ ಸಿಗಬೇಕು ಎಂದು ಹೇಳಿದೆವು. ಇದರಲ್ಲಿ ಎರಡು ಕಾರಣಗಳು ಇವೆ. ಆಗ ಅವರು ಸಂತೋಷವನ್ನು ಪಟ್ಟರು. ಅವರು ಪ್ಲಾನಿಂಗ್ ಕಮೀಷನ್‌ನ್ನು ಇಮ್ಮಿಡಿಯಟಲಿ ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಹೇಳುತ್ತೇನೆಂದರು. ಮಾನ್ಯ ಶರದ್‌ಪವಾರ್‌ಜೀಯವರು ನಾನು ಮತ್ತು ಮುಖ್ಯಮಂತ್ರಿಯವರು ಇದ್ದಾಗ ಪ್ರಸ್ತಾಪ ಮಾಡಿದರು. ಮೊನ್ನೆ ಎನ್‌ಡಿಸಿ ಮೀಟಿಂಗ್‌ನಲ್ಲಿ ಉಪಮುಖ್ಯಮಂತ್ರಿಗಳು, ಸಹ ಪ್ರಸ್ತಾಪ ಮಾಡಿದರು. ನೀವು ಏನು ರೆಸ್ಯೂಲ್ಯೂಷನ್‌ನ್ನು ಮೂವ್ ಮಾಡುತ್ತೀರಿ, ಅದಕ್ಕೆ ಸಂಪೂರ್ಣವಾದ ಬೆಂಬಲ ಇದೆ, ನಿನ್ನೆ ಮತ್ತು ಮೊನ್ನೆ ಯಾರು ಹೇಳಿದಹಾಗೆ ಇವತ್ತು ಸ್ಕೂಟರ್ ಲೋನ್ಸ್, ಕಾರ್ ಲೋನ್ಸ್ 6 ರಿಂದ 7 ಪರ್ಸೆಂಟ್ ದರದಲ್ಲಿ ಸಿಗುತ್ತಿದೆ. ಹಾಗಾದರೆ ರೈತರಿಗೆ 6 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲ ಸಿಗಬಾರದು? ಏತಕ್ಕಾಗಿ ಇದಕ್ಕೆ ವಿರೋಧ ಇರಬೇಕು. ಹಾಗಾಗಿ ಕರ್ನಾಟಕ ಇದರಲ್ಲಿ

ಲೀಡರ್‌ಶಿಪ್‌ನ್ನು ತೆಗೆದುಕೊಂಡು ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು ತಮ್ಮೆಲ್ಲರ ಸಹಕಾರದಿಂದ ಇದನ್ನು ನಾವೇ ಎಲ್ಲಾ ಮಾಡಿದ್ದೇವೆಂದು ಹೇಳುವುದಕ್ಕೆ ತಯಾರಿಲ್ಲ, ಸರ್ಕಾರ ನಮ್ಮದು ಇರಬಹುದು, ಸಲಹೆಗಳನ್ನು ತಾವು ಸಹ ಕೊಟ್ಟಿದ್ದೀರಿ. ಹಾಗಾಗಿ ರೈತರ ಸಮಸ್ಯೆಗಳು ಬಂದಾಗ ತಾವೆಲ್ಲರೂ ಹೇಳಿದಹಾಗೆ ಪಕ್ಷಾತೀತವಾದದ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ ವಿನಃ ಒಂದು ರಾಜಕೀಯ ಪಕ್ಷದ ಬಗ್ಗೆ ಅಲ್ಲ. ತಾವು ಅವಧಿಯನ್ನು ವಿಸ್ತರಣೆ ಮಾಡಬೇಕೆಂದು ಹೇಳಿದ್ದೀರಿ, ಜುಲೈ ತಿಂಗಳು ತನಕ ತೆಗೆದುಕೊಳ್ಳಿ ಎಂದು ನಾವು ಹೇಳಿದೆವು. ಇದರಲ್ಲಿ ನಮ್ಮದೊಂದು ಕಾರಣವಿತ್ತು, ರೈತರಿಗೆ ಅಣಿ ಮಾಡಬೇಕೆಂದು ಅಲ್ಲ, ಆದರೆ ಮನ್ಯ ಅಧ್ಯಕ್ಷರು ತಾವೆಲ್ಲರೂ ಸಲಹೆ ಕೊಟ್ಟಂತೆ ತಕ್ಷಣ ನಾವು ಸೆಪ್ಟೆಂಬರ್ 30ರ ತನಕ ಒಪ್ಪಿಕೊಂಡಿದ್ದೇವೆ. ಸ್ಟಾಟಿಸ್ಟಿಕ್ ಪ್ರಕಾರ ನೀವು ನೋಡಿ ನಿಮಗೆ ಬಂದ ಮಾಹಿತಿಯ ಪ್ರಕಾರ ಇನ್ನು ಅಕೌಂಟ್ಸ್ ಕ್ಲಾರಿಟಿ ಬರಬೇಕು, 2–3 ದಿನ ಹಾಲಿಡೇ ಇತ್ತು, 925 ಕೋಟಿ ರೂಪಾಯಿಗಳ ಸಾಲ ವಸೂಲಾತಿ ಯಾಗಿದೆ. ರೈತರಿಗೆ ಸರ್ಕಾರದಿಂದ 350 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡಬೇಕಾಗಿದೆ. ಇದು ಟೆಂಟೀವ್ ಫಿಗರ್ಸ್ ಆಗಿದೆ. ಇದರ ಬಗ್ಗೆ ರೀಕನ್ಸಿಲೇಷನ್ ಕೂಡ ನಡೆಯುತ್ತಿದೆ. ಇದರಲ್ಲಿ ನಾವು ಆ್ಯಡ್ ಮಾಡಬೇಕಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ: (ಮುಂದು) ಏಪ್ರಿಲ್‌ನಿಂದ ಜೂನ್‌ತನಕ ರೈತರು ಪ್ರಿನ್ಸಿಪಲ್ ಅಮೌಂಟ್‌ನ್ನು ಕೊಟ್ಟಾಗ ಬಡ್ಡಿಯನ್ನು ನಾವು ಕೊಡುತ್ತೇವೆಂದು ಹೇಳಿದ್ದೇವೆ. ರೈತರು ಜುಲೈನಿಂದ ಸೆಪ್ಟೆಂಬರ್ ಪಿರಿಯಡ್‌ವರೆಗೆ ಅಲ್ಲಿಯವರೆವಿಗೆ ಬಡ್ಡಿಯನ್ನು ನಾವು ಕೊಡಬೇಕಾಗುತ್ತದೆ. ಅದನ್ನು ಸಹ ನಾವು ಒಪ್ಪಿಕೊಳ್ಳುತ್ತಿದ್ದೇವೆ, ಹಾಗಾಗಿ ಇವತ್ತು ಮುಖ್ಯವಾಗಿ ತಾವು ಏನು ಹೇಳಿದ್ದೀರಿ, ದಿನಾಂಕ:1–4–2004ರಿಂದ 31–3–2005ರ ತನಕ ರೈತರು ಅಸಲು ಬಡ್ಡಿಯನ್ನು ಮನ್ನಾ ಮಾಡಿ ಎಂದು ಹೇಳಿದ್ದಾರೆ. ತಾವು ಅಸಲು ಹಣವನ್ನು ತೆಗೆದುಕೊಂಡು ಬಡ್ಡಿಯನ್ನು ರೀಫಂಡ್ ಮಾಡಿ ಅಡ್ಜಸ್ಟ್ ಮಾಡಿ ಎಂದು ಹೇಳಿದ್ದೀರಿ. ಮಾನ್ಯ ಸದಸ್ಯರುಗಳಾದ ಮಾಧುಸ್ವಾಮಿಯವರು ಹಾಗೂ ವಾಟಾಳ್ ನಾಗರಾಜುರವರು ಸಹ ಹೇಳಿದ್ದಾರೆ. ಮತ್ತೆ ಕೆಲವರು ಸಜೆಸ್ಟ್ ಮಾಡಿದರು. ಮೀನುಗಾರರ ಬಗ್ಗೆ ತೆಂಗು, ಅಡಕೆ ಹಾಗೂ ರೈತರ ಸಮಸ್ಯೆಗಳ ಬಗ್ಗೆ ಒಟ್ಟು ಹನ್ನೆರಡು ಸಮಸ್ಯೆಗಳು ಇವೆ. ಆ ಎಲ್ಲಾ ಸಮಸ್ಯೆಗಳನ್ನು ಕ್ರೋಡೀಕರಣ ಮಾಡಿ ಈಗಾಗಲೇ ಸಹಕಾರ ಇಲಾಖೆಯಿಂದ ಪ್ರಸ್ತಾವನೆಯನ್ನು

ಹಣಕಾಸಿನ ಸಚಿವರಿಗೆ ಕಳುಹಿಸಿಕೊಟ್ಟಿದ್ದೇವೆ. ಹಣಕಾಸಿನ ಸಚಿವರು ಮತ್ತು ನಾವು ಇದರ ಬಗ್ಗೆ ಖಂಡಿತವಾಗಿ ಒಂದು ಸಭೆಯನ್ನು ಮಾಡಿ ಇದು ಕ್ಯಾಬಿನೆಟ್‌ಗೆ ಹೋಗಬೇಕಾಗುತ್ತದೆ. It has a financial implication 3–5 ಕೋಟಿ ಅಲ್ಲ, ಇಂಪ್ಲಿಕೇಷನ್ ಎಷ್ಟು ಬರುತ್ತದೆ ಅದನ್ನು ನಾವು ನೋಡಬೇಕಾಗುತ್ತದೆ. ಅದು ಬಂದಾಗ ತಾವು ಹೇಳಿದ್ದೀರಲ್ಲಾ ರೈತರ ಪರವಾಗಿ 200 ಕೋಟಿ ಕೊಡುವಂತಹ ಪ್ರಶ್ನೆಯಲ್ಲ. 300 ಕೋಟಿ ರೂಪಾಯಿಗಳನ್ನು ಸಹ ಕೊಡಬೇಕಾಗುತ್ತದೆ. ಅದರ ಬಗ್ಗೆ ನಾವು ವಿರೋಧ ಮಾಡುತ್ತಿಲ್ಲ. ಆದರೆ ಹಣಕಾಸಿನ ಸಚಿವರು ಬಜೆಟ್‌ನ್ನು ಪ್ರಸೆಂಟ್ ಮಾಡಿದ ನಂತರ ಅವರು ಇದನ್ನು ನೋಡಬೇಕಾಗುತ್ತದೆ. ಎಷ್ಟು ಇಂಪ್ಲಿಕೇಷನ್ ಇದೆ. ಎಲ್ಲಿ ಬಜೆಟ್‌ನಲ್ಲಿ ರೀಸೋರ್ಸ್ 'ಏನು ಮುಂದೆ' ಏನಾಗುತ್ತಿತ್ತು, ಮತ್ತೊಂದು ಕ್ರಡಿಟ್ ಸಿದ್ದರಾಮಯ್ಯನವರಿಗೆ ಹೋಗಬೇಕು. ಮುಂದೆ let us be honest ನಾವು ಕನ್‌ಸಿಷನ್‌ಗೆ ಆರ್ಡರ್ ಮಾಡುತ್ತಿದ್ದೆವು. ಆದರೆ ಹಣ ರಿಲೀಸ್ ಆಗುತ್ತಿರಲಿಲ್ಲ. ಆಗ ಬಜೆಟ್‌ನಲ್ಲಿ ಸಾಕಷ್ಟು ಹಣವನ್ನು ಇಡುತ್ತಿರಲಿಲ್ಲ. ಈಗಿನ ಹಣಕಾಸಿನ ಸಚಿವರು ಕಳೆದವರ್ಷದ್ದು 60 ಕೋಟಿ ರೂಪಾಯಿ ಗಳನ್ನು ರಿಲೀಸ್ ಮಾಡಿದ್ದಾರೆ. ದಾಂಜಟಾಪಟ್ ಸ್ಕೀಮ್‌ನಲ್ಲಿ ಏನು ಹಣವನ್ನು ಇಟ್ಟರು ಇಂಪ್ರೂವ್‌ಮೆಂಟ್ ಮಾಡುತ್ತಿದ್ದಾರೆ. ಈಗ ಸಿಕ್ಸ್ತ್ ಪ್ರಾಜೆಕ್ಟ್ ಸ್ಕೀಮ್‌ಗೆ 80 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಈ ಸ್ಕೀಮ್‌ಗೆ 450 ಕೋಟಿ ರೂಪಾಯಿಗಳನ್ನು ಹಾಗಾಗಿ First time in the history of karnatka a Finance Minister has kept provision in the Budget.

ತಮಗೂ ಗೊತ್ತಿದೆ ಮಾಧುಸ್ವಾಮಿಯವರೆ, 4 ರಿಂದ 6 ವರ್ಷಗಳ ಕಾಲ ಪ್ರೈವೇಟ್ ಸೊಸೈಟಿಗಳಿಗೆ ಹಾಗೂ ಬ್ಯಾಂಕುಗಳಿಗೆ ಪೇಮೆಂಟ್ ಆಗಲಿಲ್ಲ. ಹಾಗಾಗಿ ಹಲವಾರು ಕಾರಣಗಳಿಂದ ಕ್ಷೀಣವಾದವು. ರೈತರಿಗೆ ಕೆಲವು ಕಡೆ ಲಾಭವಾಯಿತು. ಆದರೆ ಸಹಕಾರಿ ಸಂಸ್ಥೆಗಳು ಕ್ಷೀಣವಾದವು. ಇವತ್ತಿನ ಕ್ರಮದಿಂದಾಗಿ ನಮ್ಮ ಅಂದಾಜಿನ ಪ್ರಕಾರ ನನ್ನ ಹತ್ತಿರ ಟೆಂಟೆಟೀವ್ ಫಿಗರ್ಸ್ ಇದೆ, ಇದನ್ನು ಎಲ್ಲರೂ ಗಟ್ಟಿಯಾಗಿ ಹಿಡಿದು ಕೊಳ್ಳಬೇಡಿ. 5,63,472 ರೈತರಿಗೆ ಸ್ಕೀಮ್‌ನಿಂದೇ 3 ತಿಂಗಳಿನಿಂದ ಸಹಾಯವಾಗಿದೆ, ಸಹಾಯ ಮಾಡಿದ್ದೇವೆಂದು ಹೇಳುವುದು ನಮ್ಮ ಕರ್ತವ್ಯವಾಗಿದೆ. ಇದು ಸರ್ಕಾರದ ಜವಾಬ್ದಾರಿ. ಅದನ್ನು ಸರ್ಕಾರ ಮಾಡಿದೆ. ಇದರಿಂದ ಅಡ್ವಾನ್‌ಟೇಜ್‌ನ್ನು ಹೇಳುತ್ತೇನೆ. ಒಂದು ಕಡೆ

ರೈತರು ಪಾಪ, ಕಷ್ಟದಿಂದ ದೂರವಾಗುವುದಕ್ಕೆ ಸಹಾಯವಾಯಿತು. ಇನ್‌ಸ್ಟಿಟ್ಯೂಷನ್ ಮೇಲೆ ಇದ್ದಿದ್ದು ಹೋಯಿತು. ಹಲವಾರು ಪಿಆರ್‌ಡಿ ಬ್ಯಾಂಕುಗಳು, ಪ್ರೈಮರಿ ಸೊಸೈಟಿಗಳು, ಡಿಸ್ಟ್ರಿಕ್ ಕೋ ಆಪರೇಟೀವ್ ಬ್ಯಾಂಕ್ ಅದು ಸೆಕ್ಷನ್ II ಕೆಳಗಡೆ ಹೋಗಬೇಕಾಗಿತ್ತು. ಅದರಿಂದ ಸಾಕಷ್ಟು ಲಾಭವಾಗುತ್ತಿದೆ. It is going out of difficulties. ಹೀಗೆ ಡಿಸಿಸಿ ಹಾಗೂ ಪಿಆರ್‌ಡಿ ಬ್ಯಾಂಕುಗಳಿಗೆ, ಪ್ರೈವೇಟ್ ಸೊಸೈಟಿಗಳಿಗೆ ಲಾಭವಾಗಿ ಅವರಿಗೆ ಅರ್ಹತೆಗಳು ಬರುತ್ತಿದೆ. ಆ ಅರ್ಹತೆಯಿಂದ ಇವತ್ತಿನ ದಿವಸ ಕೇಂದ್ರಸರ್ಕಾರ ಮತ್ತು ನಮ್ಮ ಸರ್ಕಾರ, ಪ್ರಧಾನಮಂತ್ರಿಗಳು ಏನು ಹೇಳುತ್ತಿದ್ದಾರೆ. 2007–08ರೊಳಗಾಗಿ ಗ್ರಾಮಾಂತರ ಪ್ರದೇಶಗಳ ನಿಮ್ಮ ಕ್ರೆಡಿಟ್ ಡಬಲ್ ಆಗಬೇಕೆಂದು ಹೇಳುತ್ತಿದ್ದಾರೆ, ರೈತರಿಗೆ, ಕೂಲಿಗಾರರಿಗೆ, ಗ್ರಾಮಸ್ಥರಿಗೆ, ಅರ್ಟಿಜಾನ್ಸ್‌ಗಳಿಗೆ, ಸೊಸೈಟಿಗೆ ಎನಿಬಡಿ ಬಂದರೆ ಆ ಕೆಲಸವಾಗುತ್ತದೆ. ಅದಕ್ಕೂ ಕೂಡ ಸಹಾಯವಾಗಿದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಹಾಗಾಗಿ ತಾವು ಏನು ಹೇಳಿದಿರಿ, ನಾವು ಮತ್ತು ನೀವುಗಳು ಕೂಡಿ ಒಂದು ಒಪ್ಪಂದಕ್ಕೆ ಬಂದಿದ್ದೇವೆ. 20ರ ಒಳಗಾಗಿ ಪುನಃ ನಾವೆಲ್ಲ ತರಹದ ಬಗ್ಗೆ ವಿಚಾರವನ್ನು ಮಾಡಿ ಸಾಧಕ ಮತ್ತು ಬಾಧಕಗಳ ಬಗ್ಗೆಯೂ ಕೂಡ ವಿಚಾರ ಮಾಡಿ ಇವತ್ತು ಸರ್ಕಾರದ ನಿಲವು ಏನು ಎಂಬುದರ ಬಗ್ಗೆ ಹೇಳುತ್ತೇವೆ. ನಾವೆಲ್ಲರೂ ಕೂಡ ರೈತರ ಪರವಾಗಿದ್ದೇವೆ, ಇಲ್ಲಿ ರೈತ ವಿರೋಧಿಗಳು ಯಾರು ಕೂಡ ಇಲ್ಲ. ಏನು ಸರ್ಕಾರದ ನಿಲುವು ಇದೆ ಅದರ ಬಗ್ಗೆ ಅದರ ಬಗ್ಗೆ ಹಣಕಾಸಿನ ಸಚಿವರು ಮತ್ತು ನಾವು ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿ ಸರ್ಕಾರದ ನಿಲುವು ಸಹ ಅದೆ ಇದೆ. 25 ರೊಳಗಾಗಿ ನಾವು ಈ ಸಭೆ ಸದನದಲ್ಲಿ ತಾವು ಧರಣಿಯನ್ನು ವಾಪಸ್ಸು ತೆಗೆದುಕೊಂಡು ಸಹಕರಿಸಿದ್ದಕ್ಕಾಗಿ ತಮಗೆ ಅಭಿನಂದಿಸುತ್ತಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ದೇಶಪಾಂಡೆಯವರು ಏನಿದ್ದರೂ ಪೋಸ್ಟಮ್ಯಾನ್ ಕೆಲಸವನ್ನು ಮಾಡುತ್ತಾರೆ. ಅವರು ಮೊನ್ನೆಯಿಂದಲೂ ಕೂಡ ಏನೇ ಇದ್ದರೂ ನಿಮಗೆ ಮೆಮೋರ್ಯಾಂಡಮ್‌ನ್ನು ಕೊಡುವುದು ಎಂದು

ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನನ್ನ ಸಹದ್ಯೋಗಿ ಸ್ನೇಹಿತರಾದಂತಹ ಶ್ರೀ ದೇಶಪಾಂಡೆಯವರು ಹೇಳಿಕೆ ಮಾಡಿದ್ದಾರೆ. ನಿನ್ನೆ ನಾನು ಒಂದು ಹೇಳಿಕೆಯನ್ನು ಈ ಸದನದಲ್ಲಿ ಮಾಡಿದ್ದೇನೆ. ರಾಜ್ಯಸರ್ಕಾರ ನಾವು ರೈತರ ಪರವಾಗಿದ್ದೇವೆ. ಅದರ ಬಗ್ಗೆ ಯಾರು ಕೂಡ ಸಂಶಯ ಪಡಬೇಕಾಗಿಲ್ಲ ಎನ್ನುವ ಮಾತನ್ನು ಅತ್ಯಂತ ಸ್ಪಷ್ಟವಾಗಿ ಹೇಳಿದ್ದೇನೆ. ಈ ಕಾರಣದಿಂದಲೇ ಕೆಲವು ಸೌಲಭ್ಯಗಳನ್ನು ಇವತ್ತು ರಾಜ್ಯದಲ್ಲಿ, ಬೇರೆ ಯಾವುದೇ ರಾಜ್ಯದಲ್ಲಿ ಮಾಡದೆ ಇರತಕ್ಕಂತಹ ಕೆಲವು ಕಾರ್ಯಕ್ರಮಗಳನ್ನು ಸಮಿಶ್ರ ಸರ್ಕಾರ ಇಲ್ಲಿ ಮಾಡಿದೆ. ಅದರ ಲಾಭ ರೈತರಿಗೆ ಆಗಬೇಕು ಎಂಬುದು ಸರ್ಕಾರದ ಕಳಕಳಿಯಾಗಿದೆ. ವಿರೋಧಪಕ್ಷದವರಿಗೆ ನಾವು ಏನೋ ಎಂಬರಾಸೆ ಮಾಡಬೇಕು ಅಥವಾ ಪ್ರಿಸ್ಟೀಜಿ ಮೇಲೆ ಸರ್ಕಾರ ನಿಂತುಕೊಂಡಿದೆ ಎನ್ನುವುದನ್ನು ಕೂಡ ವಿರೋಧಪಕ್ಷದವರೂ ಕೂಡ ಭಾವಿಸಬಾರದು. ಈಗ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಡುವುದು, ಯಾರು ಮಾರ್ಚಿ2005 ಅಲ್ಲಿಯವರೆಗೆ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ, ಮತ್ತು ಧೀರ್ಘಾವಧಿ ಸಾಲ ಅದರ ಮೇಲೆ ಇರತಕ್ಕಂತಹ ಬಡ್ಡಿ ಮತ್ತು ಸುಸ್ತಿಬಡ್ಡಿ ಅಸಲು ಕಟ್ಟಿದರೆ ಬಡ್ಡಿ ಮನ್ನಾ ಮಾಡುತ್ತೇವೆ ಎಂಬುದು ಸರ್ಕಾರದ ಕಾರ್ಯಕ್ರಮ. ಜೂನ್‌ವರೆವಿಗೂ ಕೂಡ ನಾವು ಸಾಲವನ್ನು ಕಟ್ಟುವುದಕ್ಕೆ ಕಾಲಾವಧಿಯನ್ನು ಕೊಟಿದ್ದೇವೆ. ಸಾಕಷ್ಟು ರೈತರು ಅಸಲನ್ನು ಕಟ್ಟಿ ಅದರ ಲಾಭವನ್ನು ಪಡೆದುಕೊಂಡಿದ್ದಾರೆ. ಬಹಳ ಜನ ರೈತರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲದಲ್ಲಿ 1 ಲಕ್ಷದಿಂದ 2 ರಿಂದ 3 ಲಕ್ಷದವರೆವಿಗೂ ಕೂಡ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಆಗಿರುವ ಬಗ್ಗೆ ಅನೇಕ ನಿದರ್ಶನಗಳು ಇವೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರೈತರಿಗೆ ಅದರ ಬಡ್ಡಿ ಮತ್ತು ಸುಸ್ತಿಬಡ್ಡಿ ಸಹಾಯ ಮಾಡಿ ಅವರಿಗೆ ಸಾಲದ ಭಾರವನ್ನು ಕಡಿಮೆ ಮಾಡುವುದು ಇದೆಯಲ್ಲಾ ಅದು ಯಾವ ಕಾಲದಲ್ಲಿಯೂ ಕೂಡ ಆಗಿರಲಿಲ್ಲ. ಈಗಾಗಲೇ ಇಲ್ಲಿಯವರೆವಿಗೆ ಕಟ್ಟಿರತಕ್ಕಂತಹ ಅಂದರೆ ಜೂನ್ 30ರೊಳಗಡೆ ಸುಮಾರು 1 ಸಾವಿರ ಕೋಟಿ ರೂಪಾಯಿಗಳಷ್ಟು ಅಂದಾಜು ಇದೆ. ಈಗಾಗಲೇ ಅಷ್ಟು ಹಣ ಬಂದಿದೆ. 400 ಕೋಟಿ ರೂಗಳಷ್ಟು ನಾವು ಬಜೆಟ್‌ನಲ್ಲಿ ಏನು 450 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಅಷ್ಟು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ

ಮಾಡಿದ್ದೇವೆ. ಅದನ್ನು ನಾವು ಕೋ–ಆಪರೇಟೀವ್ ಸೊಸೈಟಿಗಳಿಗೆ ತುಂಬಿಕೊಡಬೇಕಾಗುತ್ತದೆ. ಕೆಲವು ಜಿಲ್ಲೆಗಳಲ್ಲಿ ಮಾನ್ಯ ಪ್ರಕಾಶಹುಕ್ಕೇರಿಯವರು ಬೆಳಗಾಂ ಜಿಲ್ಲೆಯ ಬಗ್ಗೆ ಹೇಳುತ್ತಿದ್ದರು. ಅಲ್ಲಿ 77 ಪರ್ಸೆಂಟ್ ವಸೂಲಿಯಾಗಿದೆ. ಮಂಡ್ಯದಲ್ಲಿ 86 ಪರ್ಸೆಂಟ್ ವಸೂಲಿಯಾಗಿದೆ. ರೈತರಿಗೆ ಇದರಿಂದ ನಮಗೆ ಅನುಕೂಲವಾಗುತ್ತದೆಂದು ಹೇಳಿ ಹೇಗೋ ಮಾಡಿ ಅವರು ಅಸಲನ್ನು ಕಟ್ಟಿ ಋಣಮುಕ್ತರಾಗಬೇಕೆಂದು ಹೇಳಿ ಅವರಿಗೂ ಕೂಡ ತವಕಯಿದೆ. ರೈತರಿಗೆ ಕಷ್ಟ ಇರಬಹುದು, ನಾನು ಇಲ್ಲವೆಂದು ಹೇಳುತ್ತಿಲ್ಲ, ರೈತರು ಜೇಬಿನಲ್ಲಿ ಹಣವನ್ನು ತುಂಬಿಕೊಂಡಿದ್ದಾರೆ, ಹಣ ಇಟ್ಟುಕೊಂಡು ಕುಳಿತಿರಲಿಲ್ಲ. ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವರೆಲ್ಲರೂ ಕಷ್ಟಪಟ್ಟು ಹೊಂದಿಸಿಕೊಂಡು ತೆಗೆದುಕೊಂಡು ಬಂದು ಕಟ್ಟಿ ಇವತ್ತು ಅವರು ಅದರ ಉಪಯೋಗವನ್ನು ಪಡೆದುಕೊಳ್ಳತಕ್ಕಂತಹ ಕೆಲಸವನ್ನು ಮಾಡಿದ್ದಾರೆ. ಇದರಲ್ಲಿ ನಮ್ಮ ಉದ್ದೇಶವೇನೆಂದರೆ, ಆದಷ್ಟು ಜಾಗ್ರತೆ ಅಸಲನ್ನು ಕಟ್ಟಿದರೆ 6 ಪರ್ಸೆಂಟ್ ದರದಲ್ಲಿ ಸಾಲ ಸಿಗುತ್ತದೆ. ಮತ್ತೆ ಅವರಿಗೆ ಹೊಸ ಸಾಲ ಸಿಗುತ್ತದೆ. ಮತ್ತೆ ಬಡ್ಡಿಯ ಭಾರವೂ ಕಡಿಮೆಯಾಗುತ್ತದೆ. ಭಾರತದೇಶದಲ್ಲಿ ಯಾವ ರಾಜ್ಯದಲ್ಲಿಯೂ ಕೂಡ ರೈತರಿಗೆ ಇದು ದೊಡ್ಡ ಉಪಕಾರವೆಂದು ನಾನು ಹೇಳುತ್ತಿಲ್ಲ. ಭಾರಿ ಉಪಕಾರ ರೈತರಿಗೆ ಮಾಡಿದ್ದೇವೆ. ರೈತರು ಈಗ ಉದ್ಧಾರ ಆದರು ಎಂದು ಹೇಳುವುದಿಲ್ಲ. ಇದು ಅವರಿಗೆ ಸಣ್ಣ ಸಹಾಯವಾಗುತ್ತದೆ. ಅದಕ್ಕೋಸ್ಕರ 6 ಪರ್ಸೆಂಟ್ ಬಡ್ಡಿ ದರದಲ್ಲಿ ಕೊಡುವುದು, ಉಳಿದಿರುವುದನ್ನು ನಾವು ಸರ್ಕಾರ ಭರಿಸಿಕೊಡುವುದು, ಅದಕ್ಕೋಸ್ಕರ 80 ಕೋಟಿ ರೂಪಾಯಿಗಳನ್ನು ಬಜೆಟ್ ನಲ್ಲಿಟ್ಟಿದ್ದೇವೆ. ಕಳೆದ ವರ್ಷ 60 ಕೋಟಿ ರೂಪಾಯಿಗಳು ಇಟ್ಟಿದ್ದು ಈಗಾಗಲೇ ಮಾನ್ಯ ಸಚಿವರಾದ ದೇಶಪಾಂಡೆಯವರು 60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೆವು. ನಾವು ಹೇಳಿ ಹಣವನ್ನು ಬಿಡುಗಡೆ ಮಾಡದೆಯೇ ಮತ್ತೆ ಸೊಸೈಟಿಗಳನ್ನು ಮುಳುಗಿಸತಕ್ಕಂತಹ ಕೆಲಸವನ್ನು ಮತ್ತು ಅದನ್ನು ವೀಕ್ ಮಾಡತಕ್ಕಂತಹ ಕೆಲಸವೇನಲ್ಲ. ಹಣವನ್ನು ಕೊಟ್ಟಿದ್ದೇವೆ ಹಾಗೂ ಬಿಡುಗಡೆಯನ್ನು ಸಹ ಮಾಡಿದ್ದೇವೆ, ಈ ವರ್ಷ 80 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ, ಅಷ್ಟು ಹಣವನ್ನು ಸಹ ಬಿಡುಗಡೆ ಮಾಡಿದ್ದೇವೆ. ಒಂದು ವೇಳೆ ಅವರಿಗೆ ಹೆಚ್ಚು ಸಾಲ ಕೊಟ್ಟರೆ ಇನ್ನು ಹೆಚ್ಚು ಕೊಡತಕ್ಕಂತಹ ಕೆಲಸವನ್ನು ಮಾಡಬೇಕಾಗುತ್ತದೆ. 80 ಕೋಟಿ ರೂಪಾಯಿಗಳು ಸಾಲದಿದ್ದರೆ ಅದಕ್ಕೆ ಇನ್ನು ಹೆಚ್ಚು ಅಡಿಷನಲ್ ಆಗಿ

ಕೊಡಬೇಕಾಗುತ್ತದೆ. ಏನು ಸಾಲವನ್ನು ದುಪ್ಪಟ್ಟು ಮಾಡಬೇಕೆಂದು ಇದೆ. ರೈತರಿಗೆ ಕೋ–ಆಪರೇಟೀವ್ ಸೊಸೈಟಿಗಳ ಮೂಲಕ ಕೊಡತಕ್ಕಂತಹ ಸಾಲವನ್ನು ಕೂಡ ಕಳೆದ ಸಾರಿಗಿಂತಲೂ ಈ ಸಾರಿ ಎರಡುಪಟ್ಟು ಹೆಚ್ಚು ಮಾಡಬೇಕೆಂದು ಇದೆ, ಆ ಎರಡು ಪಟ್ಟು ಹೆಚ್ಚು ಮಾಡುವುದರಿಂದ ಇನ್ನು ಹೆಚ್ಚು ಆಗಬಹುದು. ಆ ಕಾರಣದಿಂದ ಹೆಚ್ಚು ಜನರಿಗೆ ಇದರ ಲಾಭ 6 ಪರ್ಸೆಂಟ್ ಬಡ್ಡಿ ದರದಲ್ಲಿ ಸಿಗಬೇಕೆಂಬುದು ಸರ್ಕಾರದ ಕಳಕಳಿ. ಇದರ ಬಗ್ಗೆ ವಿರೋಧಪಕ್ಷದವರು ನಮ್ಮ ಉದ್ದೇಶ ಮತ್ತು ಕಳಕಳಿಯನ್ನು ಅರ್ಥಮಾಡಿಕೊಳ್ಳುತ್ತಾರೆ ಹಾಗೂ ಮೆಚ್ಚಿಕೊಳ್ಳುತ್ತಾರೆ ಎಂದು ನನ್ನ ಭಾವವಾಗಿದೆ. ಈ ಉದ್ದೇಶದಿಂದ ನಾವು ಇದನ್ನು ನಿನ್ನೆ ಮತ್ತು ಮೊನ್ನೆಯಿಂದ ಚರ್ಚೆಯಲ್ಲಿ ಹೇಳುತ್ತಿರುವುದು. ಈಗ ಸೆಪ್ಟೆಂಬರ್–30ವರೆಗೆ ಕೊಡಬೇಕೆಂದು ಹೇಳಿದ್ದೇವೆ. ಅಷ್ಟರೊಳಗಡೆ ನೀವು ಅಸಲನ್ನು ಕಟ್ಟಿ ಬಡ್ಡಿಯನ್ನು ನಾವು ಕೊಡುತ್ತೇವೆ. ಇದನ್ನು ನಾವು ಬಜೆಟ್‌ನಲ್ಲಿ ಹೇಳಿರಲಿಲ್ಲ. ಏಪ್ರಿಲ್–1ನೇ ತಾರೀಖಿನಿಂದ ಯಾರು ಅಸಲನ್ನು ಕಟ್ಟುತ್ತಾರೆ ಆ ಮಧ್ಯೆ ಜೂನ್‌ವರೆಗೆ ಬಡ್ಡಿ ಬರುತ್ತದೆಯಲ್ಲಾ ಅದನ್ನು ಅವರು ಯಾವ ಯಾವ ಕಾಲದಲ್ಲಿ ಕಟ್ಟುತ್ತಾರೆ ಆ ಬಡ್ಡಿಯನ್ನು ನಾವು ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿರಲಿಲ್ಲ. ಆದರೂ ಕೂಡ ಕೆಲವರು ಅದನ್ನು ಮಾಡಬೇಕೆಂದು ಹೇಳಿದರು. ಅವರು ಸೆಪ್ಟೆಂಬರ್ ಒಳಗಡೆ ಕಟ್ಟುತ್ತಾರಲ್ಲಾ, ಜೂನ್ ಒಳಗಡೆ ಕಟ್ಟಿರುವರು, ಮುಂದೆ ಕಟ್ಟುವವರು ಮತ್ತೆ ನಾಳೆ ಕಟ್ಟುವವರು ಸೆಪ್ಟೆಂಬರ್ 30ರೊಳಗೆ ಕಟ್ಟುವವರು ಈ ಅವಧಿಯಲ್ಲಿ ಬರತಕ್ಕಂತಹ ಬಡ್ಡಿಯನ್ನು ಕೂಡ ಸರ್ಕಾರವೇ ಭರಿಸುತ್ತದೆ. ಅದು ಕೂಡ ಅವರಿಗೆ ಭಾರ ಇಲ್ಲ. ಈ ಅವಧಿಯಲ್ಲಿ ಅವರಿಗೆ ಬೀಳತಕ್ಕಂತಹ ಬಡ್ಡಿಯನ್ನು ಕೂಡ ಸರ್ಕಾರವೇ ಭರಿಸುತ್ತದೆ. ನಾವು ಒಂದು ಹೆಜ್ಜೆ ಮುಂದೆ ಹೋಗಿ ಅದನ್ನು ಮಾಡುತ್ತೇವೆಂದು ಒಪ್ಪಿಕೊಂಡಿದ್ದೇವೆ,

ಶ್ರೀ ಸಿದ್ಧರಾಮಯ್ಯ (ಮುಂದು) 2005ರ ಮಾರ್ಚ್ 30 ರವರೆಗೆ ಯಾರ್ಯಾರು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲವನ್ನು ಕೃಷಿ ಚಟುವಟಿಗಳಿಗೆ ತೆಗೆದುಕೊಂಡಿರುವ ಸಾಲವನ್ನು ಜೂನ್ 30ರೊಳಗೆ ಕಟ್ಟುವರೋ ಅವರ ಸುಸ್ತಿಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಈ ವರ್ಷ ಬಜೆಟ್‌ನಲ್ಲಿ ಹೇಳಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರಾದ ಯಡಿಯೂರಪ್ಪನವರು ಏನು ಹೇಳುತ್ತಾರೆಂದರೆ ನಾವು ಬಜೆಟ್‌ನಲ್ಲಿ ಹೇಳಿದ್ದ

ರಿಂದಲೇ ಅವರು ಸಾಲವನ್ನು ಮಾರ್ಚ್‌ನಲ್ಲಿ ಕಟ್ಟಿದರು ಅಂತ. ಅವರು ಮಾರ್ಚ್‌ನಲ್ಲಿ ಕಟ್ಟಿದರೂ ನಮ್ಮ ಬಜೆಟ್ ಯಾವಾಗಲೂ ಪಾಸ್ ಆಗುವುದು. ಕೆಳಮನೆಯಲ್ಲಿ ಪಾಸ್ ಆಗಿ ಮೇಲ್ಮನೆಯಲ್ಲಿ ಪಾಸ್ ಆಗುತ್ತದೆ. ಇವೆರಡೂ ಸದನಗಳಲ್ಲೂ ಬಜೆಟ್ ಪಾಸ್ ಆಗಬೇಕು. ನಂತರವೇ ಬಜೆಟ್‌ನಲ್ಲಿ ಹೇಳಿರುವ ವಿಚಾರಗಳು ಏಪ್ರಿಲ್ 1 ನೇ ತಾರೀಖಿನಿಂದ ಜಾರಿಗೆ ಬರುತ್ತದೆಂದು ಅವರು ತಿಳಿದುಕೊಂಡು ಅವರು ಮಾರ್ಚ್‌ನಲ್ಲೇ ಸಾಲವನ್ನು ಕಟ್ಟಿದರು. ಅಂದರೆ 1 ನೇ ತಾರೀಖು ಬಜೆಟ್ ಮಂಡನೆಯಾದ ತಕ್ಷಣವೇ ಕೆಲವರು ಸಾಲವನ್ನು ಕಟ್ಟಿದರು, ಕೆಲವರು ಬಡ್ಡಿಯನ್ನು ತೆಗೆದುಕೊಂಡು ಸಸ್ಪೆಂಡ್ ಅಕೌಂಟ್ಸ್‌ನಲ್ಲಿ ಇಟ್ಟುಕೊಂಡಿದ್ದಾರೆ. ಇನ್ನು ಕೆಲವಾರು ಸೊಸೈಟಿಯವರು ಅಸಲನ್ನು ತೆಗೆದುಕೊಂಡಿದ್ದಾರೆ. ಹಾಗಾಗಿ ಅಷ್ಟು ಜನ ರೈತರನ್ನು ನಾವು ಇನ್ನೊಸೆಂಟ್ಸ್ ಎಂದು ತಿಳಿಯುವುದಕ್ಕೆ ಆಗುವುದಿಲ್ಲ. ಅವರನ್ನು ಇಗ್ನೊರೆಂಟ್ ಅಂತ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಬ್ಯಾಂಕಿನ ಕೆಲವರು ಸೆಕ್ರೆಟರಿಗಳು ಅಥವಾ ಅಲ್ಲಿರುವ ಕೆಲವು ಬೇರೆ ಬೇರೆ ಪದಾಧಿಕಾರಿಗಳು ಅವರಿಗೆ ಏನಾದರೂ ಹೇಳಿರಬಹುದು. ಏಪ್ರಿಲ್ 1 ನೇ ತಾರೀಖಿನಿಂದ ಇದು ಜಾರಿಗೆ ಬರುವುದೆಂದು ರೈತರಿಗೆ ಗೊತ್ತಿದೆ. ಇಷ್ಟಾದರೂ ನೀವು ಪ್ರಾಮಾಣಿಕವಾಗಿ ಕಟ್ಟಿದವರಿಗೆ ಅನ್ಯಾಯವಾಗುತ್ತದೆಂದು ಅವರಿಗೂ ನೀವು ಏಕೆ ವಿಚಾರ ಮಾಡಬಾರದೆನ್ನುವ ಮಾತನ್ನು ಹೇಳಿದ್ದೀರಿ. ಮಾರ್ಚ್ 31ರೊಳಗೆ ಕಟ್ಟಿದವರಿಗೆ ಕೂಡ ಬಡ್ಡಿಯನ್ನು ವಾಪಸ್ಸು ಮಾಡಬೇಕೆಂದು ಪ್ರಸ್ತಾಪ ಮಾಡಿದ್ದೀರಿ. ನಾವು ಇದನ್ನೆಲ್ಲಾ ಅನೇಕ ಸಾರಿ ಚರ್ಚೆ ಮಾಡಿ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರು ಮಾನ್ಯ ದೇಶಪಾಂಡೆಯವರೊಂದಿಗೆ ಹಾಗೂ ನಮ್ಮಲ್ಲಿ ಪರ್‌ಸ್ಯೂ ಮಾಡಿ ಚರ್ಚೆ ಮಾಡಬೇಕೆಂದು ಹೇಳಿ ಕಳೆದ ತಿಂಗಳು 26ರಂದು ಒಂದು ಸಭೆಯನ್ನು ಕರೆದಿದ್ದೆವು. ಆದರೆ ನಾನು 26ರಂದು ದೆಹಲಿಯಲ್ಲಿ ಹೆಲ್ಡ್‌ಅಪ್ ಆದುದರಿಂದ ಇಲ್ಲಿ ಬರಲಿಕ್ಕೆ ಆಗದೇ ಸಭೆಯನ್ನು ಮುಂದೂಡಲಾಯಿತು. ನಾವು ಈಗಾಗಲೇ ಈ ಬಗ್ಗೆ ಚರ್ಚಿಸಿದ್ದು ಎಲ್ಲಾ ಜಿಲ್ಲಾ ಬ್ಯಾಂಕುಗಳಿಂದ ಮಾಹಿತಿಯನ್ನು ತರಿಸಿಕೊಂಡು ಅದರ ಬಗ್ಗೆ ಚರ್ಚಿಸುತ್ತೇವೆ. ಇದರಿಂದ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳುತ್ತದೆ. ಫೈನಾನ್ಸ್ ಇಂಪ್ಲಿಕೇಷನ್ಸ್ ಏನು ಎನ್ನುವುದನ್ನು ನೋಡಬೇಕಾಗುತ್ತದೆ. ಏಕೆಂದರೆ, ಸರ್ಕಾರ ಸದನದಲ್ಲಿ ಹೇಳಿಕೆ ಕೊಟ್ಟ ಮೇಲೆ ಅದರಂತೆ ನಡೆದುಕೊಳ್ಳಬೇಕಾಗುತ್ತದೆ. ಸರ್ಕಾರ ಜವಾಬ್ದಾರಿಯಿಂದ ಮಾತುಗಳನ್ನು ಆಡಬೇಕಾಗುತ್ತದೆ. ಆ ಕಾರಣದಿಂದ ನಾನು ಬಹಳ ಸ್ಪಷ್ಟವಾಗಿ

ಹೇಳುತ್ತಿದ್ದೇನೆ, ಈ ಎಲ್ಲಾ ಮಾಹಿತಿಗಳನ್ನು ತೆಗೆದುಕೊಂಡು, ನಾನು ಸಹಕಾರ ಸಚಿವರು ಕುಳಿತುಕೊಂಡು ಚರ್ಚೆ ಮಾಡಿ ಮಾಹಿತಿಗಳನ್ನು ಇಟ್ಟುಕೊಂಡು ಸರ್ಕಾರಕ್ಕೆ ಇದರಿಂದ ಆರ್ಥಿಕ ಹೊರೆ ಎಷ್ಟು ಆಗುತ್ತದೆ, ಸರ್ಕಾರಕ್ಕೆ ಇದನ್ನು ಭರಿಸುವ ಶಕ್ತಿ ಇದೆಯೋ ಇಲ್ಲವೋ ಅಂತ ವಿಚಾರ ಮಾಡಬೇಕಾಗಿದೆ. ಏಕೆಂದರೆ, ನಾವು ಈಗ ಆರ್ಥಿಕ ವರ್ಷದ ಮಧ್ಯದಲ್ಲಿದ್ದೇವೆ, ಅಂದರೆ ಆರ್ಥಿಕ ವರ್ಷದ 4ನೇ ತಿಂಗಳಿನಲ್ಲಿದ್ದೇವೆ. ಅಲ್ಲದೆ ಇದನ್ನು ಸಚಿವ ಸಂಪುಟ ಸಭೆಯಲ್ಲಿಯೂ ನಿಮಗೆ ಭರವಸೆಯನ್ನು ಕೊಡಲಿಕ್ಕಾಗುವುದಿಲ್ಲ. ಭರವಸೆ ಕೊಟ್ಟ ಮೇಲೆ ಅದರಂತೆ ನಡೆದುಕೊಳ್ಳಬೇಕಾಗುತ್ತದೆ. ನೀವು ಹೇಳಿರುವ ವಿಚಾರಗಳನ್ನು ನಾವು ಗಂಭೀರವಾಗಿ ಪರಶೀಲನೆ ಮಾಡುತ್ತೇವೆ. ರೈತರ ವಿಚಾರಗಳು ಎಂದರೆ ಯಾವಾಗಲೂ ಗಂಭೀರವಾಗಿ ತೆಗೆದುಕೊಳ್ಳುತ್ತೇವೆ. ಅವರ ಬಗ್ಗೆ ಹಗುರವಾಗಿ ಮಾತನಾಡುವ ಪ್ರಶ್ನೆಯೇ ಇಲ್ಲ, ಹಗುರವಾಗಿ ಭರವಸೆಯನ್ನು ಕೊಡುವ ಪ್ರಶ್ನೆ ಇಲ್ಲ. ಆದುದರಿಂದ ನಾವು ಗಂಭೀರವಾಗಿ ಯೋಚನೆ ಮಾಡುತ್ತೇವೆ. ನಾವು ಫೈನಾನ್ಷಿಯಲ್ ಇಂಪ್ಲಿಕೇಷನ್ಸ್ ನೋಡುತ್ತೇವೆ. ಕ್ಯಾಬಿನೆಟ್‌ನಲ್ಲಿ ಚರ್ಚಿಸುತ್ತೇವೆ. ಅಮೇಲೆ ಸರ್ಕಾರದ ನಿಲುವನ್ನು ಸದನದಲ್ಲಿ ಇನ್ನು 15–20 ದಿನಗಳೊಳಗೆ ನೀಡುತ್ತೇವೆ. ಈ ಬಗ್ಗೆ ಸಭಾಧ್ಯಕ್ಷರ ಕೊಠಡಿಯಲ್ಲಿ ಮಾತನಾಡುವಾಗ ನೀವು ಸಹ ಅಲ್ಲಿದ್ದಿರಿ. ಹಾಗಾಗಿ ಇನ್ನು ಇಪ್ಪತ್ತು ದಿನಗಳೊಳಗೆ ಚರ್ಚೆ ಮಾಡಿದ ನಂತರ ನಮ್ಮ ನಿಲುವನ್ನು ಸದನದಲ್ಲಿ ಹಾಗೂ ಎಲ್ಲಾ ಮಾನ್ಯ ವಿರೋಧಪಕ್ಷದ ಸದಸ್ಯರಿಗೂ ತಿಳಿಸುವ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಸಿದ್ಧರಾಮಯ್ಯನವರು ಹಾಗೂ ಸಹಕಾರ ಸಚಿವರು ಬಹಳ ಸಮರ್ಥವಾಗಿ ಉತ್ತರಿಸಿದ್ದಾರೆ. ಅಂದರೆ ರೈತರು ಇನ್ನೊಸೆಂಟ್ಸ್ ಅಂತ ಹೇಳಿರುವಿರಿ, ಆದರೆ ನಿಮಗೆ ಒಂದು ಮಾಹಿತಿ ಗೊತ್ತಿಲ್ಲ. ನಾನು ಅತ್ಯಂತ ಪ್ರಾಮಾಣಿಕವಾಗಿ ನಮ್ಮ ಎಲ್ಲಾ ಶಾಸಕರ ಜೊತೆಗೆ ಚರ್ಚೆ ಮಾಡಿದ್ದೇವೆ. ದಿನಾಂಕ 31–03–2005ರೊಳಗೆ ಅನೇಕ ಸಹಕಾರ ಸಂಘಗಳು ಈ ಬಜೆಟ್ಟನ್ನು ಆಧಾರವಾಗಿಟ್ಟುಕೊಂಟು ಅಸಲು ಮಾತ್ರ ತೆಗೆದುಕೊಂಡು ಅವರಿಗೆ ಮತ್ತೆ ಮರುಸಾಲ ಪಾವತಿ ಮಾಡಿದೆ. ನೀವು ಈಗ ನಿಮ್ಮ ತೀರ್ಮಾನವನ್ನು ತೆಗೆದುಕೊಳ್ಳದೇ ಹೋದರೆ ಸಹಕಾರ ಸಂಘಗಳು ಬೀಗ ಹಾಕಬೇಕಾಗುತ್ತದೆ. ಪ್ರಾಮಾಣಿಕವಾಗಿ ಬಡ್ಡಿಯನ್ನು ಕಟ್ಟಿದ್ದಾರೆ. ಆ ಬಡ್ಡಿಯ ಮೊತ್ತವನ್ನು ವಾಪಸ್ಸು ಮಾಡಬೇಕಾದುದು ನಿಮ್ಮ ಧರ್ಮ. ಈ ಎರಡೂ

ಸಂಗತಿಗಳನ್ನು ನಿಮ್ಮ ಗಮನಕ್ಕೆ ತರುವುದು ನಮ್ಮ ವಿರೋಧ ಪಕ್ಷದವರಿಗೆ ಎಲ್ಲಿ ಕ್ರೆಡಿಟ್ ಹೋಗುವುದೋ ಎಂದು ಕಾಲಾವಕಾಶವನ್ನು ತಾವು ತೆಗೆದುಕೊಂಡಿರುವಿರಿ, ಆದರೂ ಚಿಂತೆಯಿಲ್ಲ. ಇದು ರಾಜ್ಯದ ರೈತರ ಜ್ವಲಂತ ಸಮಸ್ಯೆಯಾಗಿರುವುದರಿಂದ ಇದನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಅದರ ಬಗ್ಗೆ ತೀರ್ಮಾನವನ್ನು ಕೊಡುವಿರಿ, ರೈತರ ಪರವಾಗಿ ನಿಲ್ಲುವಿರಿ ಎಂಬ ವಿಶ್ವಾಸದೊಂದಿಗೆ ನಾವು ಸಹ ಸಹಕಾರವನ್ನು ಕೊಡುತ್ತೇವೆ. ಇಲ್ಲವಾದರೆ ತಾವು ಇವತ್ತು ಸದನದಲ್ಲಿ ಹೇಳಿರುವಂತೆ 20ನೇ ತಾರೀಖಿನ ನಂತರ ನೀವು ತೆಗೆದುಕೊಳ್ಳುವ ತೀರ್ಮಾನದ ಮೇಲೆ ನಾವು ಏನು ಮಾಡಬೇಕೋ ಅದನ್ನು ನಾವು ಮಾಡುತ್ತೇವೆ. ನೀವು ಏನು ಮಾಡುತ್ತೀರೋ ಅದನ್ನು ನೀವು ಮಾಡಿ. ಅದಕ್ಕೆ ಅವಕಾಶ ಕೊಡದೆ ರೈತರ ಈ ಸಮಸ್ಯೆಗೆ ಸ್ಪಂದಿಸುವಿರಿ, ಸಹಕಾರ ಸಂಘಗಳನ್ನು ಉಳಿಸುವಿರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ: ಈ ಎಲ್ಲಾ ವಿಚಾರಗಳನ್ನು ನೀವು ಶಾಸನಸಭೆಯಲ್ಲಿ ಪ್ರಸ್ತಾಪಿಸುವುದಕ್ಕೆ ಮುಂಚಿತವಾಗಿಯೇ ನಾವು ಸಹಕಾರ ಸಂಘಗಳಿಗೆ ಈ ವಿಚಾರದ ಬಗ್ಗೆ ತಿಳಿಸಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮ್ಮ ಮಾತು ನಡೆಯಲಿಲ್ಲ, ನಾವು ಈಗ ಆ ಜನರನ್ನು ಒಪ್ಪಿಸುವ ಪ್ರಯತ್ನವನ್ನು ಮಾಡಿದ್ದೇವೆ.

ಶ್ರೀ ಜಿ.ವಿ..ರಾಮರೆಡ್ಡಿ: ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು: ಪ್ರಶ್ನೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ, ಪ್ರಶ್ನೋತ್ತರವನ್ನು ಮಧ್ಯಾಹ್ನ ತೆಗೆದುಕೊಳ್ಳೋಣ, ಈಗ ಒಂದು ಪ್ರಕಟಣೆಯಿದೆ.

ಶ್ರೀ ಜಿ.ವಿ..ರಾಮರೆಡ್ಡಿ: ಇನ್ನೂ ಅರ್ಧಗಂಟೆ ಸಮಯವಿದೆ.

ಶ್ರೀ ವಾಟಾಳ್ ನಾಗರಾಜ್: ಒಂದು ಗಂಟೆಗೆ ಯಾರೂ ಹೋಗಿ ಊಟ ಮಾಡುವುದಿಲ್ಲ. ದಯವಾಡಿ ಪ್ರಶ್ನೋತ್ತರವನ್ನು ತೆಗೆದುಕೊಂಡು ಮುಗಿಸಬೇಕು.

ಶ್ರೀ ಸಿದ್ಧರಾಮಯ್ಯ: ಇನ್ನು ಒಂದು ಗಂಟೆಯ ಕಾಲ ಸಮಯವಿದೆ. ಪ್ರಶ್ನೋತ್ತರವನ್ನು ಮಾಡಿ ಮುಗಿಸಿಬಿಡಿ. ಡಿಮ್ಯಾಂಡ್ ಮೇಲೆ ಚರ್ಚೆ ಪ್ರಾರಂಭ ಮಾಡಿ 2 ಗಂಟೆಗೆ ಮುಗಿಸಿಬಿಡಿ.

ಉಪಾಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ.